ವಿಜಯಪುರ | ಸಂಪುಟ 01 | ಸಂಚಿಕೆ 258 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಗುರುವಾರ, ಡಿಸೆಂಬರ್ 07, 2023

“ರೈತರಿಗೆ ಬರ ಪರಿಹಾರ ರೂ.2 ಸಾವಿರ ಕೋಟಿ ಪರಿಹಾರ ನೀಡಲು ಸಾಧ್ಯವಾಗದ ಸರ್ಕಾರ, ವಿಧಾನಸಭೆಯ ಗಮನಕ್ಕೆ ತಾರದೆ ಅಲ್ಪಸಂಖ್ಯಾತರಿಗೆ 10 ಸಾವಿರ ಕೋಟಿ ರೂ. ಘೋಷಣೆ ಮಾಡುತ್ತಿದೆ”



– ಆರ್. ಅಶೋಕ
ಪ್ರತಿಪಕ್ಷ ನಾಯಕರು

ಮುಸ್ಲಿಮರ ಕಲ್ಯಾಣಕ್ಕೆ ರೂ.10,000 ಕೋಟಿ ಘೋಷಣೆ । ಆಡಳಿತ–ವಿರೋಧ ಪಕ್ಷದ ಸದಸ್ಯರ ತೀವ್ರ ವಾಕ್ಸಮರ । ಬಿಜೆಪಿ ಸದಸ್ಯರಿಂದ ಸಭಾತ್ಯಾಗ

# ಸಿಎಂ ಹೇಳಿಕೆಗೆ ಬಿಜೆಪಿ ಆಕ್ಷೇಪ, ಸದನದಲ್ಲಿ ಕೋಲಾಹಲ!

**ಉದಯರಶ್ಮಿ ನ್ಯೂಸ್**

ಬೆಳಗಾವಿ: ರಾಜ್ಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯದ ಕಲ್ಯಾಣಕ್ಕಾಗಿ ರೂ.10 ಸಾವಿರ ಕೋಟಿ ಮೀಸಲಿಡುವುದಾಗಿ ಘೋಷಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಬುಧವಾರ ವಿಧಾನಸಭೆಯಲ್ಲಿ ತೀವ್ರ ಕೋಲಾಹಲ ಸೃಷ್ಟಿಸಿತು.



ವಿಧಾನಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ ಬಿಜೆಪಿ ಶಾಸಕ ಸುನೀಲ್ ಕುಮಾರ್ ಅವರು, ಅಧಿವೇಶನ ನಡೆಯುವಾಗ ಸಿಎಂ ಈ ರೀತಿ ಅನುದಾನ ಘೋಷಣೆ ಮಾಡುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲದೆ ಮುಖ್ಯಮಂತ್ರಿಗಳು ವಿವರಣೆ ನೀಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಸದಸ್ಯರು, ಮುಸ್ಲಿಂ ಸಮಾವೇಶದಲ್ಲಿ ಅಲ್ಪಸಂಖ್ಯಾತರಿಗೆ 10,000 ಕೋಟಿ ರೂ. ಘೋಷಣೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದನದ ಪಾವಿತ್ರ್ಯತೆಗೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿದರು.

ಇದಕ್ಕೆ ಆಡಳಿತ ಪಕ್ಷದ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ವೇಳೆ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ತೀವ್ರ ವಾಕ್ಸಮರ ನಡೆಯಿತು.

ರೈತರಿಗೆ ಬರ ಪರಿಹಾರ ರೂ.2 ಸಾವಿರ ಕೋಟಿ ಪರಿಹಾರ ನೀಡಲು ಸಾಧ್ಯವಾಗದ ಸರ್ಕಾರ, ವಿಧಾನಸಭೆಯ ಗಮನಕ್ಕೆ ತಾರದೆ ಅಲ್ಪಸಂಖ್ಯಾತ–ರಿಗೆ 10 ಸಾವಿರ ಕೋಟಿ ರೂ. ಘೋಷಣೆ ಮಾಡುತ್ತಿದೆ ಎಂದ ಪ್ರತಿಪಕ್ಷ ನಾಯಕ ಆರ್ ಅಶೋಕ್ ಅವರು, ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಹಿಂಪಡೆದು ಸದನದ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ನಾವು ಅಧಿಕಾರದಲ್ಲಿದ್ದಾಗ ಸದನ ನಡೆಯುವಾಗ ಎಲ್ಲೂ ಈ ರೀತಿಯ ಘೋಷಣೆ ಮಾಡಿಲ್ಲ. ಹತ್ತು ಸಾವಿರ ಕೋಟಿ ಬಜೆಟ್‌ನಲ್ಲಿ ಅನುದಾನ ಕೊಡುತ್ತೇನೆ ಎಂದು ಸಿಎಂ ಘೋಷಣೆ ಮಾಡಿದ್ದಾರೆ. ಅಧಿವೇಶನ ನಡೆಯುವಾಗ ಈ ರೀತಿ ಮಾತನಾಡುವುದು ಸರಿಯಲ್ಲ ಎಂದರು.

ಸಿಎಂ ಪರವಾಗಿ ಮಾತನಾಡಿದ ಆಡಳಿತ ಪಕ್ಷದ ಸದಸ್ಯರು, ಸಿದ್ದರಾಮಯ್ಯನವರು ಅಲ್ಪಸಂಖ್ಯಾತರ ಇಲಾಖೆಗೆ ಪ್ರತಿ ವರ್ಷ ಬಜೆಟ್ ಹೆಚ್ಚಿಸುವ ಉದ್ದೇಶವಿದ್ದು, ಅಂತಿಮವಾಗಿ ಇಲಾಖೆ ಮೂಲಕ 10 ಸಾವಿರ ಕೋಟಿ ಖರ್ಚು ಮಾಡುವ ಉದ್ದೇಶವಿದೆ ಎಂದು ಹೇಳಿಕೆ ನೀಡಿದ್ದಾರೆ. ಆದರೆ ಅಲ್ಪಸಂಖ್ಯಾತ–ರಿಗೆ ಹಣ ನೀಡುವುದನ್ನು ಬಿಜೆಪಿ ವಿರೋಧಿಸುತ್ತಿದೆ ಎಂದರು.

ಇನ್ನು ಸಿಎಂ ಹೇಳಿದ್ದರಲ್ಲಿ ಏನು ತಪ್ಪಿದೆ? ಹಣಕಾಸಿನ ಯಾವುದೇ ನಿರ್ಧಾರವು ಹೇಗಿದ್ದರೂ ಅನುಮೋದನೆಗಾಗಿ ಈ ಸದನಕ್ಕೆ ಬರಲಿದೆ ಎಂದು ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸಂಸದೀಯ ವ್ಯವಹಾರಗಳ ಸಚಿವ ಹೆಚ್ ಕೆ ಪಾಟೀಲ್ ಮಾತನಾಡಿ, ಬಜೆಟ್ ಅನ್ನು 10,000 ಕೋಟಿ ರೂ.ಗೆ ಹೆಚ್ಚಿಸಲು ಪ್ರಯತ್ನಿಸುವುದಾಗಿ ಸಿಎಂ ಹೇಳಿದ್ದಾರೆ. ಇಲ್ಲಿ ನಿಯಮಗಳ ಉಲ್ಲಂಘನೆ ಏನಾಗಿದೆ? ಅವರು ಹಣ ಮಂಜೂರು ಮಾಡಿದ್ದರೆ ನೀವು ಆಕ್ಷೇಪಿಸಬಹುದು ಎಂದರು.


ಆದರೆ ಆಡಳಿತ ಪಕ್ಷದ ಉತ್ತರಕ್ಕೆ ತೃಪ್ತಿಯಾಗದ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.

## ರಾಜ ನುಡಿ

ಸುತ್ತಮುತ್ತಲು ಆವರಿಸಿದ ಗಾಳಿಯ ಅನುಭವ ಪಡೆಯಲು ಫ್ಯಾನ್ ಹೇಗೆ ಬೇಕೊ, ಅರಿವಿನ ಇರುವಿಕೆ ಇಲ್ಲದೆ ಸುತ್ತಲಿನ ಕರುಣೆ ಪ್ರೀತಿಗಳ ಅನುಭವ ಪಡೆಯಲಾಗದು..

–ಡಾ. ರಾಜಶೇಖರ ನಾಗೂರ

## ವಚನ ಚಿಂತನ 249



*ಕರಿಯ ಘಟ್ಟಿಯ ಬಿಳಿದು ಮಾಡಿ*

*ಕರಗಿಸಿ ನೋಡಿರೆ ಅಣ್ಣಾ ಕರಿಯ ಘಟ್ಟಿಯನು*
*ಆ ಕರಿಯ ಘಟ್ಟಿಯೊಳಗೊಂದು ರತ್ನವಿಪ್ಪುದು*
*ಆ ರತ್ನದ ಪರೀಕ್ಷೆಯ ಬಲ್ಲವೆಂಬವರೆಲ್ಲರ ಕಣ್ಣುಗೆಡೆಸಿತ್ತು ನೋಡಾ ?*
*ಅರು ಹಿರಿಯರೆಲ್ಲರೂ ಮರುಳಾಗಿ ಹೋದರು*
*ಕರಿಯ ಘಟ್ಟಿಯ ಬಿಳಿದು ಮಾಡಿ*
*ಮುಖದ ಮುದ್ರೆಯ ನೊಡೆಯ ಬಲ್ಲವ–ರಿಗಲ್ಲದೆ*
*ಗುಹೇಶ್ವರನ ನಿಲುವನರಿಯಬಾರದು ನೋಡಿರಣ್ಣಾ*

*– ಅಲ್ಲಮಪ್ರಭುಗಳು*

ಇಷ್ಟಲಿಂಗವೆಂಬುದು ಭೌತಿಕವಾಗಿ ಕಪ್ಪು ವರ್ಣದ ಚುಳುಕಾದ(ಚಿಕ್ಕದಾದ) ರೂಪದಲ್ಲಿರುವ ಒಂದು ಪೂಜಾ ಸಾಧನ. ಅದನ್ನು ಪೂಜಿಸುವಾಗ (ದೃಷ್ಟಿಸುವಾಗ) ನಮ್ಮ ದೃಷ್ಟಿಯು ಆ ಇಷ್ಟಲಿಂಗದ ಮೇಲೆ ಬಲಿಯುತ್ತಾ ಹೋಗುತ್ತದೆ, ಆಗ ಅದು ನಮ್ಮ ಭೌತಿಕ ಕಣ್ಣಿಗೆ ಕಪ್ಪು ವರ್ಣದಿಂದ ವಿವಿಧ ಬಣ್ಣಗಳ ತೆರೆಯು ಲಿಂಗದಿಂದ ಹೊರಹೊಮ್ಮುತ್ತದೆ, ಹಂತ ಹಂತವಾಗಿ ಇಷ್ಟಲಿಂಗವು ಜ್ಯೋತಿಯುರೂಪ ತಾಳುತ್ತದೆ. ಆಗ ನಮಗೆ ಆ ಮೂಲ ಕರಿಯ ಘಟ್ಟಿಯೊಳಗೆ ರತ್ನವಿರುವ ಅನುಭವವಾಗುತ್ತದೆ, ಮುಂದುವರೆದು ಆ ಜ್ಯೋತಿಯ ಸ್ವರೂಪವನ್ನು ಪರಿಕ್ಷೀಸುವಾಗ ದೊರೆಯುವ ಅನುಭೂತಿಯು ಅವರ್ಣನೀಯ. ಆ ಅನುಭವವನ್ನು ಪಡೆಯಲು ಪ್ರಯತ್ನಿಸಿದವರನ್ನೇ ಅಲ್ಲಮರು ಆ ರತ್ನದ ಪರೀಕ್ಷೆಯ ಬಲ್ಲವೆಂಬವರೆಲ್ಲರ ಕಣ್ಣುಗೆಡೆಸಿತ್ತು ನೋಡಾ? ಎಂದು ಉದ್ಗಾರವೆತ್ತಿದ್ದಾರೆ. ಆ ಕರಿಯ ಘಟ್ಟಿಯನು ಬಿಳಿದುಮಾಡುವ ತಂತ್ರದಲ್ಲಿಯೆ ಅನೇಕ ಅರುಹಿರಿಯರೆಲ್ಲ ಮರುಳಾಗಿ ಹೊಗಿದ್ದಾರೆ, ಎನ್ನುತ್ತಾ ಲಿಂಗದಲ್ಲಿ ಜ್ಯೋತಿಯನ್ನು ಕಾಣುತ್ತಾ ನಮ್ಮೊಳಗೆ ಅಡಗಿರುವ ಚೈತನ್ಯಾತ್ಮಕ ಶಕ್ತಿಯನ್ನು ಆ ಲಿಂಗದೊಳಗಿರುವ ಚೈತನ್ಯದೊಂದಿಗೆ ಬೆರೆಸುವ ಮೂಲಕ ನಾವು ಸಹ ಚೈತನ್ಯಸ್ವರೂಪಿಗಳು ಎಂಬುದನ್ನು ತಿಳಿದರೆ ಅದು ಗುಹೇಶ್ವರನ ನಿಲುವು. ಇದು ನಮ್ಮರಿವಿಗೆ ಬರುವುದಿಲ್ಲ ಎಂದಿದ್ದಾರೆ. ಹಾಗಾದರೆ ಲಿಂಗಪೂಜೆಯ ನೈಜ ವಿಧಾನ ಯಾವುದು ?

ಇಷ್ಟಲಿಂಗ ಪೂಜೆಯ ವಿಧಾನ ಕುರಿತು ಇಲ್ಲಿಯವರೆಗೆ ನಾವು ಅನುಸರಿಸಿದ ಪದ್ಧತಿಯು ಮೂಲತಃ ಶರಣರು ಅನುಸರಿಸಿದ ಪದ್ಧತಿಗಿಂತ ತುಂಬಾ ಭಿನ್ನವಾಗಿದೆ. ಆ ಕಾರಣದಿಂದಲೆ ನಾವುಗಳೆಲ್ಲ ನಮ್ಮ ಕರಸ್ಥಲದಲ್ಲಿ ಆ ಜ್ಯೋತಿಯ ಅನುಭವದಿಂದ ವಂಚಿತರಾಗಲು ಕಾರಣವಾಗಿದೆ, ಇಷ್ಟಲಿಂಗ ಪೂಜೆಯ ನೈಜ ವಿಧಾನವನ್ನು ಅನುಸ–ರಿಸಿದರೆ ನಾವು ಸಹ ಆ ಅನುಭವವನ್ನು ಪಡೆಯಲು ಸಾಧ್ಯ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ವಕೀಲರ ಮೇಲೆ ಪೊಲೀಸರ ಹಲ್ಲೆ ಖಂಡಿಸಿ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ಇಂಡಿ: ಹೆಲ್ಮೆಟ್ ಹಾಕದ ವಕೀಲರ ಮೇಲೆ ಪೊಲೀಸರು ನಡೆಸಿದ ಹಲ್ಲೆ ಖಂಡಿಸಿ ವಕೀಲರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.



ಪಟ್ಟಣದ ನ್ಯಾಯಾಲಯದ ಆವರಣದಿಂದ ಪ್ರತಿಭಟನೆ ಪ್ರಾರಂಭಿಸಿದ ಅವರು, ಹೃದಯ ಭಾಗದ ಬಸವೇಶ್ವರ ವೃತದಲ್ಲಿ ಸುಮಾರು 5 ನಿಮಿಷಗಳ ಕಾಲ ರಸ್ತೆ ತಡೆದು ಪೋಲಿಸರ ವಿರುದ್ಧ ಧಿಕ್ಕಾರ ಹೇಳಿ, ಆಕ್ರೋಶ ವ್ಯಕ್ತಪಡಿಸಿದರು.

ತದನಂತರ ತಾಲೂಕು ಆಡಳಿತ ಸೌಧಕ್ಕೆ ತೆರಳಿ ಉಪವಿಭಾಗ ಅಧಿಕಾರಿ ಅಬೀದ್ ಗದ್ಯಾಳ ಅವರಿಗೆ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಪಿ.ಬಿ ಪಾಟೀಲ್ ಹಾಗೂ ಹಿರಿಯ ನ್ಯಾಯವಾದಿಗಳು ಸೇರಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ನ್ಯಾಯವಾದಿ ಸೋಮು ನಿಂಬರಗಿಮಠ, ಜೆ.ಬಿ. ಬೇನೂರ ಮಾತನಾಡಿ, ಇಡೀ ದೇಶದ ಕಾನೂನು ಸುವ್ಯವಸ್ಥಿತ ಕಾಪಾಡಿಕೊಂಡು ಹೋಗುವುದರಲ್ಲಿ ನ್ಯಾಯವಾದಿಗಳು ಪ್ರಥಮರು, ಸಮಾಜದಲ್ಲಿ ಶಾಂತಿ, ಸುವ್ಯವಸ್ಥಿತ ರಕ್ಷಣೆ ಮಾಡಬೇಕಾಗಿದ್ದ ಪೋಲಿಸರು ನ್ಯಾಯವಾದಿಗಳ ಮೇಲೆ ಹಲ್ಲೆ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದು ಬೇಜಾರಿನ ಸಂಗತಿ. ಕಳೆದ ಎರಡು ದಿನಗಳ ಹಿಂದೆ

ಚಿಕ್ಕಮಂಗಳೂರು ನ್ಯಾಯವಾದಿ ಪ್ರೀತಮ್ ಎನ್ ಟಿ ಹೆಲ್ಮೆಟ್ ಧ–ರಿಸಿಲ್ಲ ಎಂಬ ಕಾರಣಕ್ಕೆ ಪೋಲಿಸರು ಅವರ ಮೇಲೆ ಹಲ್ಲೆ ನಡೆಸಿ, ದೌರ್ಜನ್ಯ ಎಸಗಿ ಅಮಾನುಷ ನಡೆದುಕೊಂಡಿದ್ದು ಖಂಡನೀಯ. ಈ ಕುರಿತು ಅಲ್ಲಿನ ನ್ಯಾಯವಾದಿಗಳು ಪ್ರತಿಭಟನೆಗೆ ಮುಂದಾದಾಗ ಅಲ್ಲಿನ ಪೋಲಿಸ್ ಇಲಾಖೆ ಅಧಿಕಾರಿಗಳು ಕಾರಣವಿಲ್ಲದೆ ಅನೇಕ ನ್ಯಾಯವಾದಿಗಳ ಮೇಲೆ ಮೂರು ಪ್ರಕರಣ ದಾಖಲಿಸುವ ಮೂಲಕ ಸಂವಿಧಾನ ವಿರೋಧಿ ನೀತಿ ಪ್ರದರ್ಶನ ಮಾಡಿದ್ದಾರೆ. ಇಂತಹ ಪೋಲಿಸರ ಮೇಲೆ ತುರ್ತು ಕಾನೂನು ಕ್ರಮ ಜರುಗಿಸಬೇಕು. ಒಂದು ವೇಳೆ ನಿರ್ಲಕ್ಷ್ಯ ವಹಿಸಿದ್ರೆ ರಾಜ್ಯಾದ್ಯಂತ ಉಗ್ರವಾದ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚ–ರಿಸಿದರು.

ಈ ಸಂದರ್ಭದಲ್ಲಿ ನ್ಯಾಯವಾದಿ ಸಂಘದ ತಾಲೂಕು ಅಧ್ಯಕ್ಷ ಪಿ.ಬಿ ಪಾಟೀಲ್, ಕಾರ್ಯದರ್ಶಿ ಎಸ್ ಆರ್ ಬಿರಾದಾರ, ನ್ಯಾಯವಾದಿ ಸಿದ್ದರಾಮ ಬೂದಿಹಾಳ, ಎಮ್ ಸಿ ಬಿರಾದಾರ, ಎಸ್ ಎಲ್ ನಿಂಬರಗಿ ಮಠ, ಪಿ.ಜಿ ನಾಡಗೌಡ, ಜೆ ಕೆ ಕಾಂಬಳೆ, ಪಿ.ಎಮ್ ಮೂರಮನ, ನಾಡಪುರೋಹಿತ, ವಾಯ್ ಎಸ್ ಪೂಜಾರಿ, ಎ ಜಿ ಜೋಶಿ, ಎಮ್ ಎಸ್ ತೇಲಿ, ಬಿ ಕೆ ಮಸಳಿ, ಎ ಎಮ್ ಬಿರಾದಾರ, ಬಿ.ಬಿ ಬಿರಾದಾರ, ಎಸ್.ಆರ್ ಮುಜಗೊಂಡ, ಎಸ್ ಜಿ ವಾಲಿಕಾರ, ಎಸ್ ಬಳವಂತಿ, ಜಿ ವಿ ಪಾಟೀಲ್, ಎಸ್ ವಿ ಪಾಟೀಲ್, ಎಸ್ ಎಸ್ ಪಾಟೀಲ್, ಎಮ್ ಪಿ ಕುಲಕರ್ಣಿ, ಸಿ ಎಸ್ ನಾಡಗೌಡ, ಜೆ ಬಿ ಬೇನೂರ, ಅಶೋಕ ದೊತ್ರೆ, ಜೆ. ಬಿ ಬಾಗವಾನ, ಯಲ್ಲಪ್ಪ ಜಮಾದಾರ, ವಾಯ್ ಎಸ್ ಪೂಜಾರಿ ಉಪಸ್ಥಿತ–ರಿದ್ದರು.

# ಡಾ.ಅಂಬೇಡ್ಕರ್ ಪರಿನಿರ್ವಾಣ ದಿನ: ಗೌರವ ಸಮರ್ಪಣೆ



**ಉದಯರಶ್ಮಿ ನ್ಯೂಸ್**


ವಿಜಯಪುರ: ಜಿಲ್ಲಾಡಳಿತದ ವತಿಯಿಂದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿ ನಿರ್ವಾಣ ದಿನದ ಪ್ರಯುಕ್ತ ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಹಾಗೂ ಜಿಪಂ ಸಿಇಒ ರಾಹುಲ್ ಶಿಂಧೆ ಅವರು ನಗರದ ಅಂಬೇಡ್ಕರ್ ವೃತ್ತದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮತ್ತು ಪುಷ್ಪಾರ್ಚನೆ ಮಾಡಿ, ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಬಸಣ್ಣೆಪ್ಪ ಕಲಶೆಟ್ಟಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಪುಂಡಲಿಕ ಮಾನವರ ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ಮುಖಂಡರು ಭಾಗವಹಿಸಿದ್ದರು.

# ಜಮೀನುಗಳಿಗೆ ರಸ್ತೆ ಬಂದ್: ಕ್ರಮಕ್ಕೆ ರೈತರ ಆಗ್ರಹ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಕೃಷಿ ಚಟುವಟಿ–ಕೆಗೆ ರಸ್ತೆ ಬಂದ್ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ರೈತ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಎಂ.ಎಸ್.ಸಿದರೆಡ್ಡಿ ಮತ್ತು ತಾಲೂಕಿನ ನಾಗರಬೆಟ್ಟ ಗ್ರಾಮದ ಕೆಲ ರೈತರು ಮಂಗಳವಾರ ತಹಶೀಲ್ದಾರ ಗೆ ಮನವಿ ಪತ್ರ ಸಲ್ಲಿಸಿದರು.




ಈ ವೇಳೆ ಮಾತನಾಡಿದ ಸಿದರೆಡ್ಡಿ, ನಾಗರಬೆಟ್ಟ ಗ್ರಾಮವು ಹೈದರಾಬಾದ ನಿಜಾಮರ ಕಾಲಘಟ್ಟದಲ್ಲಿದ್ದ ಕೊನೆಯ ಹಳ್ಳಿ. ಆಗಿನ ನಕ್ಷೆಯಲ್ಲಿ ರೈತರ ಜಮೀನುಗಳಿಗೆ ಸರಿಯಾದ ದಾರಿಗಳನ್ನು ಗುರುತಿಸಿಲ್ಲ. ಕೇವಲ ಒದು ಊರಿನಿಂದ ಮತ್ತೊಂದು ಊರಿಗೆ ತಲುಪುವ ರಸ್ತೆಗಳನ್ನು ಮಾತ್ರ ಗುರುತಿಸಿದ್ದು ಈ ರಸ್ತೆಗಳನ್ನು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಶಾಶ್ವತವಾಗಿ ಬಂದ್ ಮಾಡಿರುತ್ತಾರೆ. ಸ್ವತಃ ನನ್ನ ದಾಯಾದಿಗಳೇ ನನ್ನ ಜಮೀನಿಗೆ ಹೋಗುವ ರಸ್ತೆಯನ್ನು ಕಳೆದ ಎರಡು ತಿಂಗಳಿನಿಂದ ಮುಳ್ಳು ಕಂಟಿಗಳನ್ನು ಹಚ್ಚಿ ಬಂದ್ ಮಾಡಿರುತ್ತಾರೆ. ಇದೇ ರೀತಿ ನಮ್ಮ ಊರಿನ ಹಲವಾರು ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಇದು ಇವತ್ತೇ ಕೊನೆಯಾಗುವಂತೆ ಕ್ರಮ ವಹಿಸಬೇಕು ಎಂದು ದೂ–ರಿದರು.

ಈ ವೇಳೆ ತಹಶೀಲ್ದಾರ ಬಲರಾಮ ಕಟ್ಟಿಮನಿ ಮಾತನಾಡಿ, ರಸ್ತೆಯ ವಿಷಯವಾಗಿ ನಿಮ್ಮೂರಿನ ಎಲ್ಲ ಹಿರಿಯರು ಸೇರಿ ಬಗೆಹ–ರಿಸಿಕೊಳ್ಳುವ ಎಲ್ಲ ಸಾಧ್ಯತೆಗಳಿವೆ. ಸಣ್ಣ ಪುಟ್ಟ ವಿಚಾರಗಳನ್ನು ದೊಡ್ಡದು ಮಾಡಕೊಳ್ಳದಂತೆ ಸಲಹೆ ನೀಡಿದರು.

ಒಂದು ವೇಳೆ ಮನವಿಗೆ ತಾವು ಸರಿಯಾದ ಸ್ಪಂದನೆ ನೀಡದಿದ್ದಲ್ಲಿ ಡಿ.18 ರಿಂದ ನಿರಂತರವಾಗಿ ತಮ್ಮ ಕಚೇರಿಯ ಆವರಣದಲ್ಲಿ ಹಗಲು ರಾತ್ರಿ ನಿರಂತರವಾಗಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವದು ಎಂದು ಮನವಿ ಪತ್ರದಲ್ಲಿ ಎಚ್ಚರಿಸಲಾಗಿದೆ.

ಮನವಿ ಪತ್ರಕ್ಕೆ ಪರಮಪ್ಪ ಗು–ರಿಕಾರ, ನಿಂಗಪ್ಪ ಗುರಿಕಾರ, ಅಮರಪ್ಪ ಬಂಗಾರಗುಂಡ, ಮುರ್ತುಜಸಾಬ ವಾಲಿಕಾರ, ಹಣಮಂತ್ರಾಯ ಗುರಿಕಾರ, ಯಮನಪ್ಪ ನಂದಿಹಾಳ, ವಿರೇಶ ಚಾಕರೆಡ್ಡಿ, ಯಮನಪ್ಪ ನಂದ್ಯಾಳ, ಬಾಬುಸಾಬ ನಾಲತವಾಡ ಸಹಿ ಹಾಕಿದ್ದಾರೆ.

## ಗುಡ್ಡಗಳ ಗೆರೆ ಕೆಳಗಿನ ವಾರಸುದಾರ ಹೆಸರನ್ನು ತೆಗೆಯಲು ಆಗ್ರಹ

ಇದೇ ವೇಳೆ ನಾಗರಬೆಟ್ಟ ಗ್ರಾಮದ ಸರ್ವೆ ನಂ 51 ಮತ್ತು 89 ಈ ಎರಡೂ ಗುಡ್ಡಗಳು ಸಂಪೂರ್ಣ ನೈಸರ್ಗಿಕ ಗುಡ್ಡಗಳಾಗಿವೆ. ಹೈದರಾಬಾದ ನಿಜಾಮರ ಕಾಲದಲ್ಲಿ ಜಾಹಗೀರದಾರರ ಒಡೆತನದಲ್ಲಿತ್ತು. ಟೆನೆಂಟ್ ಕಾಯ್ದೆ ಪ್ರಕಾರ ಜಮೀನುಗಳನ್ನು ರೈತರಿಂದ ಪಟ್ಟು ತುಂಬಿಸಿಕೊಂಡು ಬಿಟ್ಟುಕೊಟ್ಟಿದ್ದಾರೆ. ಆದರೆ ಎರಡೂ ಗುಡ್ಡಗಳು ಸಂಪೂರ್ಣ ಬ ಖರಾಬ ಇರುವುದರಿಂದ ಸರಕಾರವೇ ಕೊಡೇಕಲ್ಲ ಜಾಹಗೀರುದಾರರಿಗೆ ನೀಡಿ ಅವುಗಳನ್ನು ಸರಕಾರ ಎಂದು ಧೃಢೀಕರಿಸಲಾಗಿದೆ. ಆದರೆ ಸನ್ 2005–06 ರಲ್ಲಿ ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆಗಾಗಿ ಆಗಿನ ತಹಶೀಲ್ದಾರ ಎ.ವಿ.ನಾಡಗೌಡ ತಪ್ಪು ಮಾಹಿತಿಯಿಂದಾಗಿ ಕೊಡೇಕಲ್ಲ ಜಾಹಗೀರದಾರರ ವಂಶಸ್ಥರಿಗೆ ವಾರಸಾ ಮಾಡಿದ್ದಾರೆ. ಈ ಉತಾರೆಗಳಲ್ಲಿ ಬದಲಾವಣೆಯಾಗಿದ್ದು ಈ ಎರಡೂ ಸರ್ವೆ ನಂಬರ್ ನ ಗುಡ್ಡಗಳ ಗೆರೆಯ ಕೆಳಗಿರುವ ವಾರಸುದಾರ ಹೆಸರನ್ನು ಸಂಪೂರ್ಣ ತೆಗೆದುಹಾಕಬೇಕು. ಸುರಪೂರು ತಾಲೂಕು ಕೊಡೆಕಲ್ಲ ಗ್ರಾಮದ ರಾಣಿ ರಂಗಪ್ಪ ಗಂ. ರಾಜಾ ವೆಂಕಟಪ್ಪ ನಾಯಕ ಇವರಿಂದ 2005–06 ರಿಂದ ಈವರೆಗೆ ಸರಕಾರಿ ಗುಡ್ಡವನ್ನು ಸರಕಾರಿ ದರದಲ್ಲಿ ಬಡ್ಡಿ ಸಮೇತ ವಸೂಲಿ ಮಾಡಿ ಸರಕಾರದ ಬೊಕ್ಕಸಕ್ಕೆ ಮರಳಿ ಪಾವತಿಸಬೇಕು. ಗುಡ್ಡದ 2 ಎಕರೆ ಜಮೀನದಲ್ಲಿ ಮಣ್ಣನ್ನು ಅಗೆದು ರಸ್ತೆಗಳಿಗೆ ಬಳಸಿದ ಕ್ಲಾಸ್–1 ಕಾಂಟ್ರಾಕ್ಟರ್ ನೀಲಕಂಠರಾವ ದೇಶಮುಖ ಇವರಿಂದ ಸರ್ಕಾರಕ್ಕೆ ಪಾವತಿಸಬೇಕು. ಸುತ್ತಮುತ್ತಲಿನ ಗ್ರಾಮಗಳಿಗೆ ಗೋಮಾಳ ಇಲ್ಲದ ಕಾರಣ ಈ ಎರಡೂ ಗುಡ್ಡಗಳನ್ನು ಗೋಮಾಳ ಎಂದು ಘೋಷಿಸಬೇಕು ಎಂಬ ಬೇಡಿಕೆಗಳನ್ನಿಟ್ಟು ಪ್ರತ್ಯೇಕ ಮನವಿ ಸಲ್ಲಿಸಿದರು.

## ಭಯೋತ್ಪಾದಕ ಸಂಘಟನೆ ಐಸಿಎಸ್ ಸಂಪರ್ಕದ ತನ್ವೀರ್ ಪೀರಾ ಜೊತೆ ಸಿಎಂ ಸಿದ್ದರಾಮಯ್ಯ ವೇದಿಕೆ ಹಂಚಿಕೊಂಡಿರುವ ಕುರಿತು

# ಶಾಸಕ ಯತ್ನಾಳರಿಂದ ಕೇಂದ್ರ ಗೃಹ ಸಚಿವರಿಗೆ ಪತ್ರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಭಯೋತ್ಪಾದಕ ಸಂಘಟನೆ ಐಸಿಎಸ್ ಕ್ಯಾತಿಯ ತನ್ವೀರ್ ಪೀರಾ ಅವರೊಂದಿಗೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೇದಿಕೆ ಹಂಚಿಕೊಂಡಿರುವ ಕು–ರಿತಂತೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ.

ಪತ್ರದ ಒಕ್ಕಣೆ ಹೀಗಿದೆ..

ಪೀರಾ ಅವರು ಈ ಹಿಂದೆ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿರುವ ರ್ಯಾಡಿಕಲ್ ಇಸ್ಲಾಮಿಕ್ ಔಟ್ಫಿಟ್ ನಾಯಕರನ್ನು ಭೇಟಿಯಾಗಿದ್ದರು ಎಂಬುದು ನನ್ನ ಗಮನಕ್ಕೆ ಬಂದಿದೆ. ಇನ್ನೂ ಆತಂಕಕಾರಿ ಸಂಗತಿಯೆಂದರೆ, ಪೀರಾ ಸಿಎಂ ಅವರನ್ನು ಭೇಟಿಯಾಗುತ್ತಿರುವುದು ಇದೇ ಮೊದಲಲ್ಲ. ಅವರು ಹಿಂದೆ ಅನೇಕ ಭಾರಿ ಮುಖಾಮುಖಿ ಆಗಿದ್ದಾರೆ.


ಪೀರಾ ಅವರು ನಮ್ಮ ರಾಷ್ಟ್ರದಲ್ಲಿ ಅಶಾಂತಿ ಸೃಷ್ಟಿಸುವ ಉದ್ದೇಶದಿಂದ ಮುಸ್ಲಿಂ ರಾಷ್ಟ್ರಗಳಿಂದ ನಿಧಿಯನ್ನು ತರುತ್ತಿದ್ದಾರೆ ಎಂಬ ನಂಬಲರ್ಹ ಮಾಹಿತಿ ನನಗೆ ಸಿಕ್ಕಿದೆ. ಸಿಎಂ ಅವರು ತಮ್ಮ ವೈಯಕ್ತಿಕ ಭದ್ರತೆ ಮತ್ತು ಗುಪ್ತಚರ ಸಲಹೆಯನ್ನು ಕಡೆಗಣಿಸಿರುವುದು ಅಥವಾ ತಮ್ಮ ಸ್ವಂತ ರಾಜಕೀಯ ಕಾರ್ಯಸೂಚಿಯನ್ನು ಮುಂದುವ–ರಿಸಲು ಉದ್ದೇಶಪೂರ್ವಕವಾಗಿ ಪೀರಾ ಅವರನ್ನು ಭೇಟಿ ಮಾಡಲು ನಿರ್ಧ–ರಿಸಿರುವುದು ನಿಜಕ್ಕೂ ದುರದೃಷ್ಟಕರ.

ಭಯೋತ್ಪಾದನೆಯ ಬಗ್ಗೆ ಸಹಾನುಭೂತಿ ಹೊಂದಿರುವ ವ್ಯಕ್ತಿಗಳು ಉನ್ನತ ಶ್ರೇಣಿಯ ರಾಜ–ಕೀಯ ನಾಯಕರನ್ನು, ವಿಶೇಷವಾಗಿ ಮಾಧ್ಯಮಗಳು ಮತ್ತು ನಾಗರಿಕರ ಸಮ್ಮುಖದಲ್ಲಿ ಭೇಟಿಯಾಗಲು ಸಾಧ್ಯವಾಗುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಪೀರಾ ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದನ್ನು ತಪ್ಪಿಸಲು ಸ್ಥಳೀಯ ಪೊಲೀಸರು ರಾಜ್ಯ ಸರ್ಕಾರದೊಂದಿಗೆ ಶಾಮೀಲಾಗಿದ್ದಾರೆ ಎಂದು ನಾನು ಶಂಕಿಸಿರುವ ಕಾರಣ, ಪೀರಾ ಅವರನ್ನು ದೇಶದ ಹಿತದೃಷ್ಟಿಯಿಂದ ಕೇಂದ್ರೀಯ ಸಂಸ್ಥೆಗಳಿಂದ ಕೂಲಂಕಷವಾಗಿ ತನಿಖೆ ಮಾಡುವುದು ಅಗತ್ಯವಿದೆ.



ಪೀರಾ ಅವರು ಐಸಿಸ್ ನಾಯಕರ ಭೇಟಿಯ ಉದ್ದೇಶವನ್ನು ಖಚಿತಪಡಿಸಿಕೊಳ್ಳಲು, ಅವರ ಪ್ರಯಾಣದ ನಿಧಿಯ ಮೂಲಗಳನ್ನು ಗುರುತಿಸಲು, ನಿಧಿಯ ವ್ಯವಸ್ಥಾಪಕರಾಗಿ ಅವರ ಆಪಾದಿತ ಪಾತ್ರವನ್ನು ತನಿಖೆ ಮಾಡಲು ಮತ್ತು ಅವರ ಹಲವಾರು ಸಭೆಗಳ ಸ್ವರೂಪವನ್ನು ಅರ್ಥ–ಮಾಡಿಕೊಳ್ಳಲು ಪೀರಾ ಅವರನ್ನು ವಿಚಾರಣೆಗೆ ಒಳಪಡಿಸಲು ಕೇಂದ್ರ ಅಧಿಕಾರಿಗಳಿಗೆ ನಿರ್ದೇಶಿಸಲು ನಾನು ದಯೆಯಿಂದ ವಿನಂತಿಸುತ್ತೇನೆ.

ಹೀಗೆಂದು ಶಾಸಕ ಯತ್ನಾಳರು ಅಮಿತ್ ಷಾ ಅವರಿಗೆ ಪತ್ರ ಬರೆದಿದ್ದಾರೆ.



ಗೌಡ ರಾ. ಪಾಟೀಲ (ಯತ್ನಾಳ)
ಶಾಸಕರು,
30-ವಿಜಯಪುರ ನಗರ ಮತಕ್ಷೇತ್ರ
ಕೇಂದ್ರ ರೈಲ್ವೆ ಮತ್ತು ಜವಳಿ ಸಚಿವರು (ರಾಜ್ಯ)

Basanagouda R. Patil
M.L.A
30- Vijayapur City Constituency, Ka
Former Union Railway & Textile Minis

To,
Shri Amit Shah ji
Hon'ble Home Minister
Government of India

06.12.2023

Subject: Tanveer Peera, an ISIS sympathizer, sharing the stage with Karnataka CM Siddaramaiah at Hubli.

**Respected Shri Amit Shah Ji,**

I would like to bring to your attention the concerning incident

# ರಾಜ್ಯ ಮಟ್ಟದ ಖೋ ಖೋ ಪಂದ್ಯಾವಳಿ




**ಉದಯರಶ್ಮಿ ನ್ಯೂಸ್**

ವಿಜಯಪುರ: ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ರಾಜ್ಯ ಮಟ್ಟದ ಖೋ ಖೋ ಪಂದ್ಯಾವಳಿಯು ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯದಲ್ಲಿ ಸೋಮವಾರ ನಡೆಯಿತು.

ಈ ಪಂದ್ಯಾವಳಿಯನ್ನು ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬಿ. ಎಲ್. ಡಿ. ಇ ಸಂಸ್ಥೆಯ ಕ್ರೀಡಾ ನಿರ್ದೇಶಕ ಎಸ್. ಎಸ್. ಕೋರಿ, ಸಹಾಯಕ ಕ್ರೀಡಾ ನಿರ್ದೇಶಕ ಕೈಲಾಸ ಹಿರೇಮಠ ಮುಂತಾದವರು ಉಪಸ್ಥಿತರಿದ್ದರು.

ಈ ಪಂದ್ಯಾವಳಿಯಲ್ಲಿ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಅಡಿಯಲ್ಲಿ ಬರುವ ರಾಜ್ಯದ ವೈದ್ಯಕೀಯ, ದಂತ ಆಯುರ್ವೇದ, ಹೋಮಿಯೋಪತಿ, ಯುನಾನಿ, ಫಾರ್ಮಸಿ, ನರ್ಸಿಂಗ್ ಮುಂತಾದ ಆರೋಗ್ಯ ವಿಜ್ಞಾನ ವಿದ್ಯಾಲಯಗಳು ಸೇರಿದಂತೆ ಒಟ್ಟು 35ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು.

ಪುರುಷರ ವಿಭಾಗದಲ್ಲಿ ಮೈಸೂರು ಮೆಡಿಕಲ್ ಕಾಲೇಜ್ ಹಾಗೂ ಸಂಶೋಧನಾ ಕೇಂದ್ರ, ಮೈಸೂರು ಪ್ರಥಮ ಸ್ಥಾನಗಳಿಸಿದರೆ, ಬಾಗಲಕೋಟೆಯ ಸಜ್ಜನ ಶ್ರೀ ನರ್ಸಿಂಗ್ ಕಾಲೇಜ್ ದ್ವಿತಿಯ ಸ್ಥಾನ ಗಳಿಸಿತು.

ಮಹಿಳೆಯರ ವಿಭಾಗದಲ್ಲಿ ಹಾಸನ ಸರಕಾರಿ ನರ್ಸಿಂಗ್ ಕಾಲೇಜು ಪ್ರಥಮ, ಬೆಂಗಳೂರಿನ ಶ್ರೀಮತಿ ನಾಗರತ್ನಮ್ಮ ನರ್ಸಿಂಗ್ ಕಾಲೇಜು ದ್ವಿತಿಯ ಸ್ಥಾನ ಗಳಿಸಿದೆ.

ಆಯ್ಕೆ ಪ್ರಕ್ರಿಯೆ

ಈ ಮಧ್ಯೆ ಮಂಗಳವಾರ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪುರುಷ ಮತ್ತು ಮಹಿಳೆಯರ ಖೋ ಖೋ ಆಟಗಾರರ ಆಯ್ಕೆ ಪ್ರಕ್ರಿಯೆ ನಡೆಯಿತು.

# ಡಿ.8 ರಿಂದ ರೇಡಿಯಾಲಾಜಿ– ಐಆರ್ಐಎ ಸಮ್ಮೇಳನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯ 38ನೇ ರೇಡಿಯಾಲಾಜಿ– ಐಆರ್ಐಎ ಸಮ್ಮೇಳನ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಡಿಸೆಂಬರ್ 8 ರಿಂದ 10ರ ವರೆಗೆ ಮೂರು ದಿನಗಳ ಕಾಲ ನಡೆಯಲಿದೆ.

ಕಟಿಂಗ್ ಎಡ್ಜ್ ಆಂಡ್ ಅಡ್ವಾನ್ಸಸ್ ವಿಷಯದಡಿ ಈ ಬಾರಿ ಸಮ್ಮೇಳನ ನಡೆಯುತ್ತಿದ್ದು, ಡಿಸೆಂಬರ್ 9 ರಂದು ಬೆಳಿಗ್ಗೆ 11 ಗಂಟೆಗೆ ವೈದ್ಯಕೀಯ ಕಾಲೇಜಿನ ಗ್ರಂಥಾಲಯ ಸಭಾಂಗಣದಲ್ಲಿ ಉದ್ಘಾಟನೆ ಕಾರ್ಯಕ್ರಮ ನಡೆಯಲಿದೆ. ಬೃಹತ್ ಮತ್ತು ಮಧ್ಯಮ ಕೈಗಾ–ರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಸಮ್ಮೇಳನ ಉದ್ಘಾಟಿಸಲಿದ್ದಾರೆ.

ಈ ಸಂದರ್ಭದಲ್ಲಿ ಆರೋಗ್ಯ ಸಚಿವ ದಿನೇಶ ಗುಂಡೂರಾವ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ವಿವಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಆರ್. ಎಸ್. ಮುಧೋಳ, ಸಮಕುಲಪತಿ ಡಾ. ಅರುಣ ಚಂ. ಇನಾಮದಾರ, ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ, ಐ.ಆರ್. ಐಎ ರಾಷ್ಟ್ರೀಯ ಅಧ್ಯಕ್ಷ ಡಾ. ಉಮೇಶ ಕೃಷ್ಣಮೂರ್ತಿ, ರಾಜ್ಯಾಧ್ಯಕ್ಷ ಡಾ. ಪಿ. ಬಿ. ಶೆಟ್ಟಿ, ರಾಜ್ಯ ಕಾರ್ಯದರ್ಶಿ ಡಾ. ರವಿ, ಬಿ.ಎಲ್.ಡಿ.ಎ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಅಲೈಡ್ ಸಾಯಿನ್ಸ್ ಡೀನ್ ಡಾ. ಎಸ್. ವಿ. ಪಾಟೀಲ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಮುಂತಾದವರು ಪಾಲ್ಗೊಳ್ಳಲಿದ್ದಾರೆ.

ದೇಶದ ನಾನಾ ಭಾಗಗಳಿಂದ ಸುಮಾರು 500ಕ್ಕೂ ಹೆಚ್ಚು ಪ್ರತಿನಿಧಿಗಳುಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಡಿಸೆಂಬರ್ 8 ರಂದು ಪೂರ್ವ ಸಮ್ಮೇಳನ(ಕಡಿಜ ಅಂಟಿಜಿಜಡಿಜಟಿಛಿಜ) ನಡೆಯಲಿದೆ. ಡಿಸೆಂಬರ್ 9 ಮತ್ತು 10 ರಂದು ರೇಡಿಯಾಲಜಿ ವಿಷಯಕ್ಕೆ ಸಂಬಂಧಿಸಿದಂತೆ ನಾನಾ ಗೋಷ್ಠಿಗಳು ನಡೆಯಲಿವೆ. 50ಕ್ಕೂ ಹೆಚ್ಚು ತಜ್ಞವೈದ್ಯರು ಉಪನ್ಯಾಸ ನೀಡಲಿದ್ದಾರೆ.

ಅಲ್ಲದೇ, ಸುಮಾರು 30ಕ್ಕೂ ಹೆಚ್ಚು ರೆಡಿಯಾಲಜಿ ಕಂಪನಿಗಳು ತಾವು ಸಂಶೋಧಿಸಿರುವ ನೂತನ ತಂತ್ರಜ್ಞಾನಗಳು, ಸಂಶೋಧನೆಗಳನ್ನು ಈ ಸಂದರ್ಭದಲ್ಲಿ ಪ್ರಸ್ತುತ ಪಡಿಸಲಿದ್ದಾರೆ ಎಂದು ಬಿ.ಎಲ್.ಡಿ.ಇ ಆಸ್ಪತ್ರೆಯ ರೆಡಿಯೋಲಾಜಿ ವಿಭಾಗದ ಮುಖ್ಯಸ್ಥ ಮತ್ತು ಸಮ್ಮೇಳನ ಸಂಘಟನಾ ಅಧ್ಯಕ್ಷ ಡಾ. ರಾಜಶೇಖರ ಮುಚ್ಚಂಡಿ ತಿಳಿಸಿದ್ದಾರೆ.

ಈ ಸಮ್ಮೇಳನದ ಆಯೋಜನೆಯಿಂದ ಈ ಭಾಗದ ರೆಡಿಯಾಲಜಿ ವೈದ್ಯರು ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ. ಜ್ಞಾನ ವಿನಿಮಯಕ್ಕೂ ಹೆಚ್ಚಿಗೆ ಸಹಾಯವಾಗಲಿದೆ ಎಂದು ಸಮ್ಮೇಳನ ಸಂಘಟನಾ ಕಾರ್ಯದರ್ಶಿ ಡಾ. ಶಿವಾನಂದ ಪಾಟೀಲ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

# ಹರ್ ಘರ್ ಗೀತಾ ಕೋಟಿ ಜಪ ಯಜ್ಞ

**ಉದಯರಶ್ಮಿ ನ್ಯೂಸ್**

ವಿಜಯಪುರ: ಬರಲಿರುವ ಜನೇವರಿಯಲ್ಲಿ ಉಡುಪಿ ಶ್ರೀ ಕೃಷ್ಣ ರ್ಯಾಯ ಪೀಠ ಅಲಂಕರಿಸಲಿರುವ ಪುತ್ತಿಗೆ ಮಠದ ಕಿರಿಯ ಶ್ರೀಪಾದಂಗಳ ಸುಶ್ರೀಂದ್ರತೀರ್ಥರು ಹರ್ ಘರ್ ಗೀತಾ ಯೋಜನೆ ಮೂಲಕ ಹಮ್ಮಿಕೊಂಡಿರುವ ಕೋಟಿ ಲೇಖನ ಜಪಯಜ್ಞವನ್ನು ಯಶಸ್ವಿಗೊಳಿಸುವಂತೆ ಕರೆ ನೀಡಿದರು.

ಅವರು ತಮ್ಮ ವಿಜಯಪುರ ಸಂಚಾರದಲ್ಲಿ ಶ್ರೀಕೃಷ್ಣ–ವಾದಿರಾಜ ಮಠದಲ್ಲಿ ನೀಡಿದ ಅನುಗ್ರಹ ಸಂದೇಶದಲ್ಲಿ ಭಗವದ್ಗೀತೆ ಶ್ರೀಕೃಷ್ಣ ಪರಮಾತ್ಮನ ಉಪದೇಶವಾಗಿದ್ದು ಮಾನವ ಕಲ್ಯಾಣಕ್ಕೆ ಪರಮೋಪಕಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರತಿಯೊಬ್ಬರು ಇದರಲ್ಲಿ ಭಾಗವಹಿಸುವ ಮೂಲಕ ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳಬೇಕೆಂದು ಕರೆ ಕೊಟ್ಟ ಶ್ರೀಗಳು, ಈ ಸಲ ರ್ಯಾಯದಲ್ಲಿ ಹಿರಿಯ ಶ್ರೀಗಳಾದ ಸುಗುಣೇಂದ್ರ ಶ್ರೀಪಾದರು ಮಹಾದ್ವಾರ ಮತ್ತು ಸ್ವರ್ಣಕೃಷ್ಣನ ಸಮರ್ಪಣೆ ಮಾಡಲಿದ್ದಾರೆಂದರು.



ಶ್ರೀಪಾದರು ಸನ್ಯಾಸತ್ವ ಸ್ವೀಕರಿಸಿ 50 ವರ್ಷ ಪೂರ್ಣಗೊಂಡಿದ್ದು ದೇಶ–ವಿದೇಶಗಳಲ್ಲಿ ಅವರಿಗೆ ಸಂಭ್ರಮದ ಸ್ವಾಗತ ಹಾಗೂ ಗೌರವ ಸಮರ್ಪಣೆಗಳ ಸುರಿಮಳೆ ನಡೆದಿದೆ. ಇದು ಅವರ ಜನ ಮೆಚ್ಚುಗೆಯ ಸಂಕೇತ ಎಂದು ವ್ಯಾಖ್ಯಾನಿಸಿದರು.

ಇದು ಅವರ ನಾಲ್ಕನೆ ರ್ಯಾಯ. ಪ್ರತಿ ರ್ಯಾಯದಲ್ಲೂ ಅವರು ವಿವಿಧ ಸೇವಾ ಸಮರ್ಪಣೆ ಮಾಡುತ್ತ ಬಂದಿರುವುದು ನಮಗೆಲ್ಲ ಮಾರ್ಗದರ್ಶನ ಎಂದರು.

ಸಮಸ್ತ ಭಕ್ತಾದಿಗಳು ತಮ್ಮ ರ್ಯಾಯ ಸಮಯದಲ್ಲಿ ಉಡುಪಿ ಶ್ರೀಕೃಷ್ಣನ ದರ್ಶನಕ್ಕೆ ಬರುವಂತೆ ಅವರು ಕರೆ ನೀಡಿದರು.

ಶ್ರೀಕೃಷ್ಣ ವಾದಿರಾಜ ಮಠದ ಆಡಳಿತ ಮಂಡಳಿ ಅಧ್ಯಕ್ಷ ಡಾ. ಕಿರಣ ಚುಳಕಿ, ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ, ಖಜಾಂಚಿ ಅಶೋಕರಾವ್, ಹಿರಿಯ ಸದಸ್ಯರಾದ ವಿ.ಸಿ.ಕುಲಕರ್ಣಿ, ವಿ.ಬಿ.ಕುಲಕರ್ಣಿ, ವಿಕಾಸ ಪದಕಿ, ಗೋವಿಂದ ದೇಶಪಾಂಡೆ, ಹಿರಿಯ ಉಪಾಧ್ಯಕ್ಷ ಡಾ. ಮಲಘಾಣ, ಸದಸ್ಯರಾದ ಗೋವಿಂದ ಜೋಶಿ ಉಪಸ್ಥಿತರಿದ್ದರು.

ಉಪಾಧ್ಯಕ್ಷ ಡಾ. ಆರ್. ಜೆ.ಮಂಗಲಗಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮಠದ ವ್ಯವಸ್ಥಾಪಕ ಪಂಡಿತ ವಾಸುದೇವ್ ಆಚಾರ್ಯ ಶ್ರೀಗಳನ್ನು ಅದ್ದೂರಿಯಾಗಿ ಸ್ವಾಗತಿಸಿ ವೇದಿಕೆಗೆ ಕರೆತಂದರು. ನಗರದ ಬ್ರಾಹ್ಮಣ ಸಮಾಜದ ಪ್ರಮುಖರು ಉಪಸ್ಥಿತ–ರಿದ್ದರು. ವಿವಿಧ ಮಠಗಳ ಪದಾಧಿಕಾ–ರಿಗಳು ಶ್ರೀಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

# ಬಸವ ವಸತಿ ಯೋಜನೆಯಲ್ಲಿ ಅನ್ಯಾಯ :ಮಾದರ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಾಲೂಕಿನ ಕುಂಟೋಜಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಹೊಕ್ರಾಣಿ ಗ್ರಾಮಕ್ಕೆ ಸಂಬಂಧಿಸಿದ ಬಸವ ವಸತಿ ಯೋಜನೆಯಲ್ಲಿ ಮನೆಗಳನ್ನು ಹಂಚಿಕೆ ಮಾಡುವ ಕುರಿತು ಆಯ್ಕೆ ಮಾಡಿದ ಯಾದಿಯಲ್ಲಿ ಈಗಾಗಲೇ ಸ್ವಂತ ಮನೆಗಳನ್ನು ಹೊಂದಿದವ–ರಿಗೆ ಪುನಃ ಆಯ್ಕೆ ಮಾಡಲಾಗಿದೆ. ಇದು ಅನಧಿಕೃತವಾಗಿದ್ದು ನಿಜವಾದ ಬಡವರಿಗೆ ಆಯ್ಕೆ ಮಾಡಬೇಕು ಎಂದು ಚನ್ನಪ್ಪ ಮಾದರ ಇಲ್ಲಿನ ಪ್ರಭಾರ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಮನವಿ ಪ್ರತಿಯನ್ನು ಸುದ್ದಿಗಾರರಿಗೆ ಮುಟ್ಟಿಸಿದ ಅವರು, ಗ್ರಾಮ ಸಭೆಯಲ್ಲಿ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಿದ್ದು ಆಯ್ಕೆಯಾದ ಯಾದಿಯಲ್ಲಿ ಅವರನ್ನು ಕೈಬಿಟ್ಟಿದ್ದಾರೆ, ಕಾರಣ ಈ ಕೂಡಲೇ ಗ್ರಾಮ ಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೇ ಮನೆಗಳನ್ನು ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

# ಶಾಸಕ ಯತ್ನಾಳರದು ಕಾರ್ಯಕರ್ತರಿಗೆ ಮಿಡಿವ ಹೃದಯ :ಆಹೇರಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ತೀವ್ರ ಅನಾರೋಗ್ಯಕ್ಕೆ ತುತ್ತಾಗಿರುವ ಅತಾಲಟ್ಟಿ ಗ್ರಾಮದ ಬಿಜೆಪಿಯ ಕಾರ್ಯಕರ್ತ ಮಹಾದೇವಪ್ಪನನ್ನು ಕರೆತಂದು ನಗರದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದಾಖಲಿಸಿ ಅವರ ಚಿಕಿತ್ಸೆಯ ವೆಚ್ಚವನ್ನು ಶಾಸಕ ಬಸನಗೌಡ ಪಾಟೀಲ ಯತ್ನಾಳ ಭರಿಸಿ ಮಾನವೀಯತೆ ಮೆರೆದಿದ್ದಾರೆ.

ಈ ಕುರಿತು ಕೃತಜ್ಞತೆಯಿಂದ ಕಾರ್ಯಕರ್ತ ಮಹಾದೇವಪ್ಪ ಆಹೇರಿ ಪತ್ರಿಕೆಯೊಂದಿಗೆ ಮಾತನಾಡಿ, "ನಾನು ಶಾಸಕ

ಬಸನಗೌಡರ ಬೆಂಬಲಿಗನಾಗಿ ಇಲ್ಲಿಯವರೆಗೂ ದುಡಿದಿದ್ದೇನೆ. ಬೆಂಬಲಿಗರನ್ನು ಕೇವಲ ಕೆಲಸಕ್ಕಾಗಿ ಮಾತ್ರ ಉಪಯೋಗಿಸುವ ಗುಣ ಗೌಡರಲ್ಲಿ ಇಲ್ಲ. ಅದಕ್ಕೆ ನಾನೇ ಸಾಕ್ಷಿ. ವಿಪರೀತ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ನನ್ನನ್ನು ಇಲ್ಲಿಗೆ ಕರೆತಂದು ಉಪಚಾರ ಮಾಡಿಸುತ್ತಿರುವುದು ಮತ್ತು ನನ್ನ ಚಿಕಿತ್ಸೆಯನ್ನು ಸಂಪೂರ್ಣವಾಗಿ ಉಚಿತಗೊಳಿಸಿರುವ ಅವರ ಪ್ರೀತಿಗೆ ನಾನು ಏನು ಹೇಳಿದರು ಕಡಿಮೆಯೇ" ಎಂದು ಭಾವೋದ್ವೇಗದಿಂದ ಮಹಾದೇವಪ್ಪ ಹೇಳುವಾಗ ಅವರ ಕಣ್ಣಂಚು ಹಸಿಯಾಗಿತ್ತು.

ಇವರ ಆರೋಗ್ಯದ ಕುರಿತು ಮಾಹಿತಿ ನೀಡಿದ ಜೆಎಸ್ಎಸ್ ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್ಕರ್ ಅವರು, "ಸಧ್ಯಕ್ಕೆ ಮಹಾದೇವಪ್ಪ ಅವರ ಆರೋಗ್ಯ ಸ್ಥಿರವಾಗಿದ್ದು, ಅಗತ್ಯತೆಯುಳ್ಳ ಎಲ್ಲ ರೀತಿಯ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಅವಶ್ಯಕವಿರುವ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಬಸನಗೌಡರ ಆಸೆಯಂತೆ ಅವರು ಗುಣಮುಖರಾಗುವವರೆಗೂ ನಮ್ಮ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು" ಎಂದು ತಿಳಿಸಿದರು.

JSS HOSPITALS
REDEFINING HEALTHCARE

# ಡಾ.ಅಂಬೇಡ್ಕರ್ ಪುತ್ಥಳಿಗೆ ಗೌರವ ಸಮರ್ಪಣೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಒಕ್ಕೂಟದ ಸದಸ್ಯರು ಹಾಗೂ ವಿಜಯಪುರದ ಆರ್.ಕೆ ಹಾಸ್ಪಿಟಲ್‌ನ ಸಿಬ್ಬಂದಿಗಳು ಸಂವಿದಾನ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್ ಮಹಾಪರಿನಿರ್ಮಾಣ ದಿನದ ಅಂಗವಾಗಿ ಪಟ್ಟಣದ ಅಂಬೇಡ್ಕರ್ ವೃತದಲ್ಲಿನ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಮರ್ಪಣೆ ಮಾಡಿದರು. ಈ ವೇಳೆ ತಾಲೂಕು ಅದ್ಯಕ್ಷ ರಾಜಶೇಕರ ಮ್ಯಾಗೇರಿ, ಜಿಲ್ಲಾ ಮಹಿಳಾ ಅದ್ಯಕ್ಷೆ ಅಕ್ಷತಾ ಚಲವಾದಿ, ತಾಲೂಕು ಮಹಿಳಾದ್ಯಕ್ಷೆ ನೀಲಮ್ಮ ಚಲವಾದಿ, ಪ್ರಧಾನ ಕಾರ್ಯದರ್ಶಿ ಹಣಮಂತ ನಲವಡೆ, ಸದಸ್ಯರಾದ ರಾಜು ಬಳ್ಳೊಳ್ಳಿ, ಶರಣು ಸಾಲವಾಡಗಿ ಹಣಮಂತ ಕಲ್ಯಾಣಿ ಸೇರಿದಂತೆ ಇತರರು ಇದ್ದರು.



# ವ್ಯವಸ್ಥಿತ ಜೀವನಕ್ಕೆ ನೈತಿಕತೆಯ ಚೌಕಟ್ಟು ಅಗತ್ಯ :ಕತ್ತಿ



**ಉದಯರಶ್ಮಿ ನ್ಯೂಸ್**

ಸಿಂದಗಿ: ಕನ್ನಡ ಸಾಹಿತ್ಯಕ್ಕೆ ಭವ್ಯವಾದ ಸಂಸ್ಕೃತಿ ಮತ್ತು ಪರಂಪರೆಯಿದೆ. ಕನ್ನಡ ಭಾಷೆಗೆ ಸಾವಿರಾರು ವರುಷಗಳ ಇತಿಹಾಸವಿದೆ ಎಂದು ಸಿ.ಎಂ.ಮನಗೂಳಿ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಅರವಿಂದ ಮನಗೂಳಿ ಹೇಳಿದರು.

ಬುಧವಾರದಂದು ಪಟ್ಟಣದ ಎಚ್.ಜಿ.ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಶ್ರೀಮತಿ ಕಲ್ಲವ್ವ ರಂಗಪ್ಪ ಹೆಗ್ಗನದೊಡ್ಡಿ, ದತ್ತಿದಾನಿಗಳಾದ ಡಾ.ಎ.ಆರ್. ಹೆಗ್ಗನದೊಡ್ಡಿ ಹಾಗೂ ಶ್ರೀಮತಿ ಗೌರಮ್ಮ ಸಿದ್ರಾಮಪ್ಪ ವಾಡೇದ ದತ್ತಿ ದಾನಿಗಳಾದ ಮಕ್ಕಳ ಸಾಹಿತಿ ರಾಮಚಂದ್ರ ವಾಡೇದ ಅವರು ನೀಡಿದ ದತ್ತಿ ದಾನದ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚಲನಚಿತ್ರ, ಜಾನಪದ, ನಾಟಕ ಹಾಗೂ ಮೌಖಿ-ಕ ಪರಂಪರೆಯಿಂದ ಬಂದಿರುವ ಗ್ರಾಮೀಣ ಪ್ರದೇಶದ ಸಂಸ್ಕೃತಿಯು ಕನ್ನಡ ಸಾಹಿತ್ಯ ಪರಿಷತ್ತನ್ನು ಉಳಿಸಿ ಬೆಳೆಸಿದ್ದಾರೆ. ಮೈಸೂರು ರಾಜಮನೆತನದ ಅರಸರು ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು.

ಪದ್ಮರಾಜ ಮಹಿಳಾ ಮಹಾವಿದ್ಯಾಲಯದ ಉಪನ್ಯಾಸಕಿ ಹೇಮಾ ಹಿರೇಮಠ ಅವರು ಶಿಕ್ಷಣ ಮತ್ತು ಸಾಹಿತ್ಯ ಕುರಿತು ಉಪನ್ಯಾಸ ನೀಡಿ, ಸಮಾಜದಲ್ಲಿ ಭಾಷೆ ಹಾಗೂ ಸಾಹಿತ್ಯವನ್ನು ಬೆಳೆಸುವದು ಕೇವಲ ಸಾಹಿತಿಗಳ ಕಾಯಕವಲ್ಲ. ಮಕ್ಕಳಿಗೆ ಭಾಷೆಯನ್ನು ಬೋಧಿಸಲು ಶಿಕ್ಷಕರು ಸಹ ಶ್ರಮವಹಿಸಬೇಕು. ಸ್ಮರಣ ಶಕ್ತಿಯ ಬೆಳವಣಿಗೆಯಲ್ಲಿ ಸಾಹಿತ್ಯಕ್ಕೆ ಮಹತ್ವ ಸ್ಥಾನವಿದೆ. ಸಾಹಿತ್ಯ ಎಂಬ ಪರಿಕಲ್ಪನೆ ಬದುಕಿನ ಕಲ್ಪನಾಶೀಲ ಅನುಭವಗಳನ್ನು ತನ್ನ ಕಡೆಗೆ ಸೆಳೆಯುತ್ತದೆ. ಸಾಹಿತ್ಯ ಕೇವಲ ಓದಿಗೆ ಮಾತ್ರ ಸೀಮಿತವಾಗಬಾರದು. ಆದ್ದರಿಂದ ಶಿಕ್ಷಣದಲ್ಲಿ ಸಾಹಿತ್ಯದ ಪಾತ್ರದ ಕುರಿತಾದ ಚಿಂತನೆ ಮಹತ್ವಪೂರ್ಣವಾಗಿದೆ ಎಂದರು.

ಎಚ್.ಜಿ.ಪಪೂ ಮಹಾವಿದ್ಯಾಲಯದ ಉಪನ್ಯಾಸಕಿ ಮುಕ್ತಾಯಕ್ಕ ಕತ್ತಿ ಅವರು ಜನಪದ ಸಾಹಿತ್ಯದಲ್ಲಿ ನೀತಿ ಕುರಿತು ಉಪನ್ಯಾಸ ನೀಡಿ, ಜನಪದ ಎಂದರೆ ಜನರ ಪದ. ಪದ ಅಂದರೆ ಶಬ್ದ. ಇಲ್ಲಿ ಪದಗಳು ಜೋಡಣೆಯಾಗಿ ಹಾಡು, ಕಥೆ, ತ್ರಿಪದಿ, ಗಾದೆ ಮಾತು ಮತ್ತು ಒಗಟುಗಳಾಗಿವೆ. ಸಾಹಿತ್ಯ ಎಂದರೆ ಲಿಖಿತ ಕೃತಿಗಳ ಒಂದು ದೇಹ. ಸಾಹಿತ್ಯ ಎಂಬುದು ಕೇವಲ ಮುದ್ರಿತಗೊಂಡ ಪುಸ್ತಕವಲ್ಲ. ಅದರ ಮೂಲ ಕವಿ ಹೃದಯದಲ್ಲಿದೆ. ನೀತಿ ಎಂದರೆ ಒಳ್ಳೆಯ ನಡತೆ. ಮನುಷ್ಯನ ಜೀವನ ವ್ಯವಸ್ಥಿತವಾಗಿ ಸಾಗಿಸಲು ನೈತಿಕತೆಯ ಚೌಕಟ್ಟು ಬೇಕು. ನೀತಿ ಎಂಬ ನಿಬಂಧನೆ ಇರಬೇಕು. ಇದು ಎಲ್ಲಾ ಕಲೆ-ಸಾಹಿತ್ಯಕ್ಕೆ ತಾಯಿ ಬೇರು ಮತ್ತು ಗುರುಸ್ಥಾನ ಹೊಂದಿರುವಂತಹದ್ದು ಎಂದು ಹೇಳಿದರು.

ಈ ವೇಳೆ ದತ್ತಿ ದಾನಿಗಳಾದ ಎ.ಆರ್.ಹೆಗ್ಗನದೊಡ್ಡಿ, ರಾಮಚಂದ್ರ ವಾಡೇದ, ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ತಾಲೂಕಾಧ್ಯಕ್ಷ ಶಿವಾನಂದ ಬಡಾನೂರ ಮಾತನಾಡಿದರು.

ಮಹಾಂತೇಶ ಪಟ್ಟಣಶೆಟ್ಟಿ, ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ ದೇವರಡ್ಡಿ, ಕೆ.ಹೆಚ್. ಸೋಮಾಪುರ, ಅಶೋಕ ಸುಲ್ಪಿ, ಶಾಂತಪ್ಪ ರಾಣಾಗೋಳ, ಶಿಲ್ಪಾ ಕುದರಗೊಂಡ, ಶರಣಮ್ಮ ನಾಯಕ, ಜಯಶ್ರೀ ಕುಲಕರ್ಣಿ, ಚಂದ್ರಶೇಖರ ನಾಗರಬೆಟ್ಟ, ಸಂಗನಗೌಡ ಪಾಟೀಲ, ಸತೀಶ ಬಸರಕೋಡ, ಭೀಮನಗೌಡ ಬಿರಾದಾರ, ಡಾ.ಅಂಬರಿಷ ಬಿರಾದಾರ. ಎಪ್.ಎ.ಹಾಲಪ್ಪನವರ. ಶಿವಕುಮಾರ ಕಲ್ಲೂರ, ಅಬ್ದುಲ್‌ಖಾದರ ವಾಲೀಕಾರ, ಎಸ್.ಎ.ಪಾಟೀಲ, ಶಾಂತು ಬಿರಾದಾರ. ಡಾ.ಎಸ್.ಎಸ್ ಚವ್ಹಾಣ, ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಾಂತಿಲಾಲ ಚವ್ಹಾಣ ಸ್ವಾಗತಿಸಿದರು. ಸಿದ್ದಲಿಂಗ ಕಿಣಗಿ ನಿರೂಪಿಸಿದರು.

### ನಿಡಗುಂದಿಯಲ್ಲಿ 'ಪ್ರೇರಣಾ-2023' ಕಾರ್ಯಕ್ರಮದಲ್ಲಿ ಅಭಿಷೇಕ ಖ್ಯಾಡಿ ಅಭಿಮತ

# ಓದುವ ಪ್ರವೃತ್ತಿಯೇ ಬದುಕಿನ ದಾರಿ ಕಟ್ಟಿಕೊಳ್ಳಲು ರಹದಾರಿ

**ಉದಯರಶ್ಮಿ ನ್ಯೂಸ್**



ನಿಡಗುಂದಿ: ಓದುವ ಪ್ರವೃತ್ತಿ ಬೆಳೆಸಿಕೊಂಡು, ಓದಿನ ಜತೆ ನಮ್ಮ ವೈಯಕ್ತಿಕ ಪ್ರವೃತ್ತಿಗಳಿಗೂ, ಮನೋರಂಜನೆಗೂ ಆದ್ಯತೆ ಎಷ್ಟು ನೀಡಬೇಕು? ಎಂಬುದನ್ನು ನಮ್ಮಷ್ಟಕ್ಕೆ ನಾವೇ ಅರಿತುಕೊಂಡು, ಅದೇ ರೀತಿ ಸಾಗಿದರೆ ಯಶಸ್ವಿ ಖಂಡಿತ ಸಾಧ್ಯ ಎಂದು ನೌಕಾಪಡೆಯ ಲೆಫ್ಟಿನಂಟ್ ಆಲಮಟ್ಟಿಯ ಅಭಿಷೇಕ ಖ್ಯಾಡಿ ಅಭಿಪ್ರಾಯಪಟ್ಟರು.

ಪಟ್ಟಣದ ಜಿವಿವಿಎಸ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿಡಗುಂದಿ ತಾಲ್ಲೂಕು ಘಟಕ ಹಮ್ಮಿಕೊಂಡಿದ್ದ ಪ್ರೇರಣಾ-2023 ಕಾರ್ಯಕ್ರಮ ಅಂಗವಾಗಿ, ಎನ್ ಡಿಎ ಪರೀಕ್ಷೆಯ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು.

ಶಾಲಾ ಗ್ರಂಥಾಲಯದಲ್ಲಿ ಪುಸ್ತಕ ಓದುವ ಚಟ ಹೆಚ್ಚಿಸಿಕೊಳ್ಳಿ, ವಿದ್ಯಾರ್ಥಿಗಳಲ್ಲಿ ಈಗ ಮೊಬೈಲ್ ಹಾಗೂ ಸಾಮಾಜಿಕ ಜಾಲ ತಾಣದ ಬಳಕೆ ಹೆಚ್ಚಿದೆ. ಅದನ್ನೇ ಕಲಿಕೆಗಾಗಿ ಸದುಪಯೋಗ ಮಾಡಿಕೊಳ್ಳಬೇಕು, ಬುದ್ಧಿಶಕ್ತಿ ಹೆಚ್ಚಿಸುವ ಗೇಮ್ ಗಳನ್ನು ಆಡಬೇಕು, ಜ್ಞಾನ ಪಡೆಯುವ ಯೂಟ್ಯೂಬ್ ಚೆನಲ್ ಗಳನ್ನು ನೋಡಬೇಕು, ಒಮ್ಮೆಲೆ ಈಗಿರುವ ಪ್ರವೃತ್ತಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ, ಅದನ್ನು ಹಂತ ಹಂತವಾಗಿ ಬದಲಾಯಿಸಿಕೊಳ್ಳಿ ಎಂದರು.

ಯಾವುದೇ ಕಾರ್ಯವಿರಲಿ, ಓದಿರಲಿ, ಮನೆಗೆಲಸವಿರಲಿ, ಕ್ರೀಡೆಯಿರಲಿ ಅದನ್ನು ಖುಷಿಯಿಂದ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು, ಅಂದಾಗ ಅಧ್ಯಯನ ಜತೆಗೆ ಬದುಕಿನ ವ್ಯಕ್ತಿತ್ವ ಬದಲಾವಣೆಗೂ ಕಾರಣವಾಗುತ್ತದೆ ಎಂದರು.

ಸೇನೆಯ ಮೂರು ವಿಭಾಗದ ಅಧಿಕಾರಿಯಾಗಲು ಎನ್ ಡಿಎ ಅಕಾಡೆಮಿ ಸೇರುವುದು ಒಳ್ಳೆಯ ಅವಕಾಶ, ಇಡೀ ಜಗತ್ತಿನಲ್ಲಿಯೇ ಅತ್ಯುತ್ತಮ ತರಬೇತಿ ನೀಡುವ ಸಂಸ್ಥೆಯಾಗಿದೆ ಎಂದರು. ಎನ್ ಡಿಎ ಪಿಯುಸಿ ದ್ವಿತೀಯ ವರ್ಷ ಓದುವಾಗಲೇ ಕಟ್ಟಬಹುದು, ಒಟ್ಟಾರೇ 17.5 ವರ್ಷ ವಯಸ್ಸಿನಿಂದ 19.5 ವರ್ಷ ವಯಸ್ಸಿನವರೆಗೂ ಪರೀಕ್ಷೆ ಕಟ್ಟಬಹುದು. ಆಯ್ಕೆಗಾಗಿ ಐದು ದಿನಗಳ ಕಾಲ ನಡೆಯುವ ವ್ಯಕ್ತಿತ್ವ ಪರೀಕ್ಷೆ ಜಗತ್ತಿನಲ್ಲಿಯೇ ಅತ್ಯಂತ ಕಠಿಣ, ವಿಶ್ವಾಸಾರ್ಹ ಪರೀಕ್ಷೆ ಎನಿಸಿದೆ ಎಂದರು.

ಭೂಸೇನೆಯ ಲೆಫ್ಟಿನಂಟ್ ಸಿಂದಗಿ ತಾಲ್ಲೂಕಿನ ಗಬಸಾವಳಗಿ ಗ್ರಾಮದ ಅರುಣ ಬಿರಾದಾರ ಮಾತನಾಡಿ, ಯಶಸ್ವಿಗೆ ಒಳ್ಳೆಯ ಗೆಳೆಯರ ಸಂಪರ್ಕ ಹಾಗೂ ವಾತಾವರಣ ಅಗತ್ಯ ಎಂದರು. ಯಾವುದೇ ವಿಷಯವಿರಲಿ ಪ್ರತಿಯೊಂದನ್ನು ಗೆಳೆಯರಲ್ಲಿಯೇ ಚರ್ಚೆ ಮಾಡಿದರೆ ವಿಷಯ ದೃಢಿಕರಣದ ಜತೆಗೆ ಓದು ವಿಸ್ತಾರಗೊಳ್ಳುತ್ತದೆ, ಹೀಗಾಗಿ ಒಳ್ಳೆಯ ಗೆಳೆಯರ ಜತೆ ಸಂಪರ್ಕ ಇಟ್ಟುಕೊಳ್ಳಿ ಎಂದರು. ಹೃದಯಾಂತರದಿಂದ ಬಂದಿದ್ದನ್ನು ಫಾಲೋ ಮಾಡಬೇಕು ಎಂದರು. ಟೈಮ್ ಮ್ಯಾನೇಜ್ ಮೆಂಟ್ ಬದುಕಿನಲ್ಲಿ ಅಗತ್ಯ. ನಾಳೆ ಏನು ಮಾಡುತ್ತೇವೆ, ಓದು, ಇನ್ನೀತರ ಚಟುವಟಿಕೆಗಳಿಗೆ ಎಷ್ಟು ಸಮಯ ಮೀಸಲಿರುತ್ತೇವೆ ಎಂಬುದನ್ನು ಹಿಂದಿನ ದಿನವೇ ಮನಸ್ಸಿನಲ್ಲಿಯೇ ಮಾಡಿಟ್ಟುಕೊಳ್ಳಬೇಕು, ಇದರಿಂದ ನಮ್ಮ ವ್ಯಕ್ತಿತ್ವವೂ ಬದಲಾಗುತ್ತದೆ, ಜತೆಗೆ ಯಶಸ್ಸು ಸಾಧ್ಯ ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಗಾಗಿ ಸಾಧಕರನ್ನು ಕರೆಯಿಸಿ ಅವರೊಂದಿಗೆ ಸಂವಾದ ಏರ್ಪಡಿಸಿ ಅವರಲ್ಲಿಯೂ ಬದಲಾವಣೆ ಆಗಲಿ, ಕೆಲವು ಜನರಾದರೂ ಅವ-ರಿಂದ ಪ್ರೇರಣೆ ಹೊಂದಲಿ ಎನ್ನುವ ಉದ್ದೇಶದಿಂದ "ಪ್ರೇರಣಾ-2ಕೆ23' ಕಾರ್ಯಕ್ರಮವನ್ನು ನಮ್ಮ ಶಿಕ್ಷಕರ ಸಂಘ ಹಮ್ಮಿಕೊಂಡಿದೆ, ಇದು ನಿರಂತರವಾಗಿ ಸಾಗಲಿದೆ ಎಂದರು.

ಜಿವಿವಿಎಸ್ ಶಿಕ್ಷಣ ಸಂಸ್ಥೆಗಳ ನಿರ್ದೇಶಕ ಡಾ ಅನೂಪ್ ನಾಗಠಾಣ ಕಾರ್ಯಕ್ರಮ ಉದ್ಘಾಟಿಸಿದರು.

ವೇದಿಕೆಯ ಮೇಲೆ ಬಿ.ಎಸ್. ನಾಯಕ, ಜೆ.ಜಿ. ವಾರಿ, ನೌಕರರ ಸಂಘದ ಅಧ್ಯಕ್ಷ ಆರ್.ಎ. ನದಾಫ್, ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಎಸ್. ಮುಕಾರ್ತಿಹಾಳ, ಸಲೀಂ ದಡೆದ, ರಾಘವೇಂದ್ರ ವಂದಗನೂರ, ರಾಜು ಹಲಗಿ ಮತ್ತೀತರರು ಇದ್ದರು.

ಸಂವಾದ ಕಾರ್ಯಕ್ರಮದ ನಂತರ ಭಾಗವಹಿಸಿದ್ದ 600 ಕ್ಕೂ ಹೆಚ್ಚು ಪ್ರೌಢ ಹಾಗೂ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸುಮಾರು ಒಂದು ಗಂಟೆಗಳ ಕಾಲ ಸಂವಾದ ನಡೆಸಿದ ಇಬ್ಬರು ಸೇನಾಧಿಕಾರಿಗಳು, ಎನ್ ಡಿಎ ಪರೀಕ್ಷೆ ಪಾಸಾಗಲು ಈ ಭಾಗದ ವಿದ್ಯಾರ್ಥಿಗಳಿಗೆ ಪುಸ್ತಕಗಳು, ತರಬೇತಿಗೆ ಅಗತ್ಯವಿರುವ ಮಾಹಿತಿ, ಮಾರ್ಗದರ್ಶನ ಸೇರಿದಂತೆ ಅಗತ್ಯವಿರುವ ಮಾಹಿತಿಯನ್ನು ಉಚಿತವಾಗಿ ನೀಡುವುದಾಗಿ ಹೇಳಿದರು.

### ಡಾ.ಅಂಬೇಡ್ಕರ 67ನೇ ಮಹಾ ಪರಿನಿರ್ವಾಣ ಶೋಕ ಆಚರಿಸಿದ ದಲಿತ ವಿದ್ಯಾರ್ಥಿ ಪರಿಷತ್

# ಜ್ಞಾನವನ್ನು ಹೊಂದದೇ ವಿಮೋಚನೆ ಹೊಂದಲು ಸಾಧ್ಯವಿಲ್ಲ

**ಉದಯರಶ್ಮಿ ನ್ಯೂಸ್**



ವಿಜಯಪುರ: ಜ್ಞಾನವನ್ನು ಹೊಂದದೇ ವಿಮೋಚನೆ ಹೊಂದಲು ಸಾಧ್ಯವಿಲ್ಲ. ಸಂಘಟನಾತ್ಮಕ ಹೋರಾಟವಿಲ್ಲದೇ ಘನತೆಯ ಬದುಕು ಬದುಕಲು ಸಾಧ್ಯವಿಲ್ಲ. ಜ್ಞಾನ ದೀವಿಗೆಯು ಶೋಷಣೆಯ ಕತ್ತಲನ್ನು ಸೀಳಿ ಇಡೀ ಪೀಳಿಗೆಯನ್ನು ಬೆಳಕಿನೆಡೆಗೆ ಕೊಂಡೊಯ್ಯುತ್ತದೆ ಎಂಬ ಸಂದೇಶವನ್ನು ಬಡವರು, ಶೋಷಿತ ಅಸ್ಪೃಶ್ಯರು, ದುರ್ಬಲ ವರ್ಗದ ಜನರ ಬದುಕಿಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಮಹಾನ್ ಚೇತನ ಬಾಬಾ ಸಾಹೇಬರು ಇಂದು ನಮ್ಮೊಂದಿಗೆ ಇಲ್ಲ ಎಂಬುದು ತುಂಬಾ ದುಃಖದ ಸಂಗತಿ. ಅವರು ಹಾಕಿದ ಮಾರ್ಗದಲ್ಲಿ ನಾವೆಲ್ಲರೂ ನಡೆಯೋಣ ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಂಚಾಲಕರಾದ ಅಕ್ಷಯ ಅಜಮನಿ ಹೇಳಿದರು.

ನಗರದ ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಕಚೇರಿಯಲ್ಲಿ ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರ 67 ನೇ ಮಹಾ ಪರಿನಿರ್ವಾಣ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಮೊಂಬತ್ತಿ ಬೆಳಗಿ ಸಂತಾಪ ಸೂಚಿಸುವ ಮೂಲಕ ಸರಳವಾಗಿ ಆಚರಿಸಲಾಯಿತು.

ಈ ವೇಳೆ ದಲಿತ ವಿದ್ಯಾರ್ಥಿ ಪರಿಷತ್‌ನ ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ, ಮುಖಂಡರಾದ ಸಂಘರ್ಷ ಹೊಸಮನಿ, ಕಾಶಿನಾಥ ಕಟ್ಟಿಮನಿ, ಮಾದೇಶ ಬಾಗೇವಾಡಿ, ಸತೀಶ ಅಂಜುಟಗಿ, ಪ್ರದಾನಿ ನಾಯಕ, ಸೇರಿದಂತೆ ಇತರರು ಇದ್ದರು.

# ಡಾ.ಅಂಬೇಡ್ಕರ ಮಹಾಪರಿನಿರ್ವಾಣ ದಿನಾಚರಣೆ



**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ಎಚ್.ಜಿ. ಪದವಿ-ಪೂರ್ವ ಮಹಾವಿದ್ಯಾಲಯದ ಸಭಾಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಎಚ್.ಜಿ. ಪದವಿಪೂರ್ವ ಮಹಾವಿದ್ಯಾಲಯದ ಸಹಯೋಗದಲ್ಲಿ ಭಾರತದ ಸಂವಿಧಾನ ನಿರ್ಮಾತೃ, ಭಾರತರತ್ನ, ಡಾ.ಬಿ.ಆರ್ ಅಂಬೇಡ್ಕರ ಅವರ ಮಹಾಪ-ರಿನಿರ್ವಾಣ ದಿನವನ್ನು ಆಚರಣೆ ಮಾಡಲಾಯಿತು.

ಈ ವೇಳೆ ಡಾ.ಅರವಿಂದ ಮನಗೂಳಿ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಬಡಾನೂರ. ಗೌರವಾಧ್ಯಕ್ಷ ಮಹಾಂತೇಶ ಪಟ್ಟಣಶೆಟ್ಟಿ. ಮಕ್ಕಳ ಸಾಹಿತಿ ರಾ.ಸಿ. ವಾಡೇದ, ದಲಿತ ಮುಖಂಡ ಅಶೋಕ ಸುಲ್ಪಿ. ಉಪನ್ಯಾಸಕಿ ಹೇಮಾ ಹಿರೇಮಠ, ಮುಕ್ತಾಯಕ್ಕ ಕತ್ತಿ, ಗೌರವ ಕಾರ್ಯದರ್ಶಿ ಶಿವಕುಮಾರ ಕಲ್ಲೂರ, ಕೋಶಾಧ್ಯಕ್ಷ ಖಾದರ ವಾಲೀಕಾರ. ಪದಾಧಿಕಾರಿ ಶಾಂತಪ್ಪ ರಾಣಾಗೋಳ, ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ ದೇವರಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಡಾ.ಅಂಬೇಡ್ಕರ ಮಹಾ ಪರಿನಿರ್ವಾಣ ದಿನಾಚರಣೆ



**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ಎಚ್.ಜಿ. ಪದವಿ-ಪೂರ್ವ ಮಹಾವಿದ್ಯಾಲಯದ ಸಭಾಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಎಚ್.ಜಿ. ಪದವಿಪೂರ್ವ ಮಹಾವಿದ್ಯಾಲಯದ ಸಹಯೋಗದಲ್ಲಿ ಭಾರತದ ಸಂವಿಧಾನ ನಿರ್ಮಾತೃ, ಭಾರತರತ್ನ, ಡಾ.ಬಿ.ಆರ್ ಅಂಬೇಡ್ಕರ ಅವರ ಮಹಾಪ-ರಿನಿರ್ವಾಣ ದಿನವನ್ನು ಆಚರಣೆ ಮಾಡಲಾಯಿತು.

ಈ ವೇಳೆ ಡಾ.ಅರವಿಂದ ಮನಗೂಳಿ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಬಡಾನೂರ. ಗೌರವಾಧ್ಯಕ್ಷ ಮಹಾಂತೇಶ ಪಟ್ಟಣಶೆಟ್ಟಿ. ಮಕ್ಕಳ ಸಾಹಿತಿ ರಾ.ಸಿ. ವಾಡೇದ, ದಲಿತ ಮುಖಂಡ ಅಶೋಕ ಸುಲ್ಪಿ. ಉಪನ್ಯಾಸಕಿ ಹೇಮಾ ಹಿರೇಮಠ, ಮುಕ್ತಾಯಕ್ಕ ಕತ್ತಿ, ಗೌರವ ಕಾರ್ಯದರ್ಶಿ ಶಿವಕುಮಾರ ಕಲ್ಲೂರ, ಕೋಶಾಧ್ಯಕ್ಷ ಖಾದರ ವಾಲೀಕಾರ. ಪದಾಧಿಕಾರಿ ಶಾಂತಪ್ಪ ರಾಣಾಗೋಳ, ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ ದೇವರಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಾರ್ತಾ ಇಲಾಖೆಯಿಂದ ದರಪಟ್ಟಿ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಿಜಯಪುರ ಸಹಾಯಕ ನಿರ್ದೇಶಕರ ಕಚೇರಿಯಲ್ಲಿರುವ ಹಳೆಯ ನಿರುಪಯುಕ್ತ ಸಾಮಗ್ರಿಗಳು ಹಾಗೂ ಹಳೆಯ ದಿನಪತ್ರಿಕೆಗಳನ್ನು ವಿಲೇವಾರಿ ಮಾಡಲಾಗುತ್ತಿದೆ.

ಆಸಕ್ತ ಸಂಸ್ಥೆಗಳು ದಿನಾಂಕ : 11-12-2023ರ ಸಂಜೆ 5 ಗಂಟೆಯೊಳಗಾಗಿ ದರಪಟ್ಟಿಗಳನ್ನು ಸಲ್ಲಿಸಬಹುದಾಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ ಹಿಂಭಾಗ, ಸ್ಟೇಶನ್ ರಸ್ತೆ, ವಿಜಯಪುರ ಕಚೇರಿಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಡಿ.14 ರಂದು ಸಿರಿಧಾನ್ಯ ಪಾಕ ಸ್ಪರ್ಧೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಅಂತರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳ 2024ರ ಅಂಗವಾಗಿ ವಿಜಯಪುರ ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ವಿಜಯಪುರದ ಜಿಲ್ಲಾ ಕೃಷಿ ತರಬೇತಿ ಕೇಂದ್ರ,ಹಿಟ್ನಳ್ಳಿ ಫಾರ್ಮದಲ್ಲಿ ಡಿಸೆಂಬರ್ 14 ರಂದು ಏರ್ಪಡಿಸಲಾಗಿದೆ.

ರಾಜ್ಯ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕಾಗಿ ಜಿಲ್ಲೆಯಿಂದ ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಜಿಲ್ಲೆಯ ಎಲ್ಲ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿರುತ್ತದೆ. ಸಿರಿ ಧಾನ್ಯ ಪಾಕ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಚಿಸುವವರು ತಮ್ಮ ಹೆಸರನ್ನು ಡಿಸೆಂಬರ್ 13ರೊಳಗಾಗಿ ವಿಜಯಪುರದ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿಯ ದೂರವಾಣಿ 9108151786 ಸಂಖ್ಯೆಗೆ ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಾ ಪ್ರತಿಭೆ ಅನಾವರಣಗೊಂಡ ಚಿಗುರು

**ಉದಯರಶ್ಮಿ ನ್ಯೂಸ್**




ವಿಜಯಪುರ: ಮಕ್ಕಳಲ್ಲಿರುವ ಕಲಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಅವಶ್ಯಕತೆ ಇದೆ ಎಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಅಧ್ಯಕ್ಷರಾದ ಸುರೇಶ ದೇಸಾಯಿ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬುಧವಾರ ನಗರದ ವಿವೇಕನಗರದ ಶಿವಶರಣೆ ಹೆಮರೆಡ್ಡಿ ಮಲ್ಲಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕರ್ನಾಟಕ ಸಂಭ್ರಮ-50ರ ಅಂಗವಾಗಿ ಆಯೋಜಿಸಿದ ಚಿಗುರು ಸಾಂಸ್ಕೃತಿ-ಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶೈಕ್ಷಣಿಕ ಹಾಗೂ ಕ್ರೀಡೆಯ ಜೊತೆಗೆ ಮಕ್ಕಳಿಗೆ ನಮ್ಮ ಕಲೆ ಸಂಸ್ಕೃತಿ ಸಾಹಿತ್ಯವನ್ನು ಪರಿಚಯಿಸುವುದರೊಂದಿಗೆ ಅವರಲ್ಲಿ ಅಡಗಿರುವ ಕಲಾ ಪ್ರತಿಭೆಯನ್ನು ಬೆಳಕಿಗೆ ತರಲು ಶಿಕ್ಷಕರು ಹಾಗೂ ಪೋಷಕರು ಪ್ರಯತ್ನಿಸಬೇಕು ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಜಿ.ಎಂ.ಬಿರಾದಾರ, ಪ್ರಾಥಮಿಕ ವಿಭಾಗದ ಮುಖ್ಯ ಗುರುಗಳಾದ ಇ.ಜಿ.ಬಿರಾದಾರ, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಭಾಗವಹಿಸಿದ್ದರು. ಪ್ರಾಸ್ತಾವಿಕವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ ಮಾತನಾಡಿ, ಸ್ವಾಗತಿಸಿದರು. ಎಚ್.ಎ.ಮಮದಾಪುರ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ವಿಜಯಪುರದ ಕುಮಾರಿ ಸುಮಯ್ಯಾ ಶೇಖ ಇವ-ರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ನಾಟ್ಯ ಕಲಾ ಅಕಾಡೆಮಿಯಿಂದ ಸಮೂಹ ನೃತ್ಯ, ಹಿಟ್ನಳ್ಳಿಯ ಕುಮಾರಿ ನಿಜಾಬಾಯಿ ಹೋಸಾಳಿ ಅವರಿಂದ ಏಕಾಪಾತ್ರಾಭಿನಯ, ಜಾನವಿ ಎನ್.ಗೌಡ ಅವರಿಂದ ಸುಗಮ ಸಂಗೀತ, ಕು.ಲಕ್ಷ್ಮೀ ಮುರನಕೇರಿ ಅವರಿಂದ ಜಾನಪದ ಗೀತೆಗಳು, ಬಬಲೇಶ್ವರದ ಕುಮಾರ ಸಮರ್ಥ ಸಂಕೊಂಡ ಅವ-ರಿಂದ ನಲಿ-ಕಲಿ ನಾಟಕ ಪ್ರದರ್ಶನ ಸೇರಿದಂತೆ ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು ಜರುಗಿದವು.

# ನಿವಾಳಖೇಡ ಗ್ರಾಮದ ಮಹಿಳೆ ಕಾಣೆ: ಪತ್ತೆಗೆ ಮನವಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ದೇವರ ಹಿಪ್ಪರಗಿ ತಾಲೂಕಿನ ನಿವಾಳಖೇಡ ಗ್ರಾಮದ ನಿವಾಸಿ 22 ವರ್ಷ ವಯಸ್ಸಿನ ಶೃತಿ ತಂದೆ ಹಣಮಂತ ಮೇಲಿನಮನಿ ಎಂಬ ಮಹಿಳೆ ದಿನಾಂಕ:24–11–2023 ರಿಂದ ಕಾಣೆಯಾಗಿರುವ ಕುರಿತು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾಣೆಯಾದ ಮಹಿಳೆಯ ಪತ್ತೆಗೆ ಮನವಿ ಮಾಡಿಕೊಳ್ಳಲಾಗಿದೆ.



ಕಾಣೆಯಾದ ಮಹಿಳೆಯು 4 ಫೂಟ್ 4 ಇಂಚು ಎತ್ತರ, ಕೋಲು ಮುಖ, ಚೂಪು ಮೂಗು, ಮೈಯಿಂದ ಸಾಧಾರಣ, ಸಾದಗೆಂಪು ಮೈ ಬಣ್ಣ,ಕರಿ ಕೂದಲು ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಿದ್ದು, ಕಾಣೆಯಾದ ಸಂದರ್ಭದಲ್ಲಿ ಹಳದಿ ಬಣ್ಣದ ಚೂಡಿದಾರ ಟಾಪ ಹಾಗೂ ಬಿಳಿ ಬಣ್ಣದ ಲೆಗಿನ್ಸ್ ಧರಿಸಿರುತ್ತಾಳೆ. ಈ ಚಹರೆಪಟ್ಟಿಯುಳ್ಳ ಮಹಿಳೆ ಪತ್ತೆಯಾದಲ್ಲಿ ಸಾರ್ವಜನಿಕರು ಸಿ.ಪಿ.ಐ ವಿಜಯಪುರ ಗ್ರಾಮೀಣ ವೃತ್ತ ದೂ: 08352–251217, ದೇವರ ಹಿಪ್ಪರಗಿ ಪೊಲೀಸ್ ಠಾಣೆ ಸಂಖ್ಯೆ: 08424283033 ಕಂಟ್ರೋಲ್ ರೂಂ ನಂ.08352250844 ಸಂಖ್ಯೆಗೆ ಮಾಹಿತಿ ನೀಡುವಂತೆ ಠಾಣೆಯ ಪೊಲೀಸ್ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರಕೇರಿ–ಗುಡ್ಡಾಪುರ ಜಾತ್ರೆಗೆ ವಿಶೇಷ ಸಾರಿಗೆ ವ್ಯವಸ್ಥೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಡಿ.8 ರಿಂದ 14ರವರೆಗೆ ಜರುಗುವ ಅರಕೇರಿಯ ಶ್ರೀ ಅಮೋಘಸಿದ್ದ ದೇವರ ಜಾತ್ರೆ ಹಾಗೂ ಗುಡ್ಡಾಪುರದ ಶ್ರೀ ದಾನಮ್ಮದೇವಿ ಜಾತ್ರೆಗೆ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದಿಂದ ವಿಶೇಷ ಬಸ್‌ಗಳ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ವಿಜಯಪುರ ವಿಭಾಗದ ವಿಜಯಪುರ, ಇಂಡಿ, ಸಿಂದಗಿ ಮುದ್ದೇಬಿಹಾಳ, ತಾಳಿಕೋಟ ಹಾಗೂ ಬಸವನಬಾಗೇವಾಡಿ ಘಟಕದ ಕೇಂದ್ರ ಬಸ್ ನಿಲ್ದಾಣಗಳಿಂದ ಅರಕೇರಿ ಹಾಗೂ ಗುಡ್ಡಾಪುರಕ್ಕೆ ವಿಶೇಷ ಸಾರಿಗೆಗಳ ಕಾರ್ಯಾಚರಣೆ ಮಾಡಲಾಗುವುದು. ಪ್ರಯಾಣಿಕರು ಸಾರಿಗೆ ಸೌಲಭ್ಯಕ್ಕಾಗಿ ಹಾಗೂ ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ವಿಜಯಪುರ–1 ಮೊ: 7760992263, ವಿಜಯಪುರ–2 ಮೊ: 7760992264, ವಿಜಯಪುರ–3 ಮೊ: 7760914008, ಇಂಡಿ ಮೊ: 7760992265, ಸಿಂದಗಿ ಮೊ: 7760992266, ಮುದ್ದೇಬಿಹಾಳ ಮೊ: 7760992267, ತಾಳಿಕೋಟ ಮೊ: 7760992268, ಬಸವನಬಾಗೇವಾಡಿ ಮೊ: 7760992269, ಕೇಂದ್ರ ಬಸ್ ನಿಲ್ದಾಣ ದೂ:08352–251344 ಹಾಗೂ ವಿಜಯಪುರ ಕೇಂದ್ರ ಬಸ್ ನಿಲ್ದಾಣ ಸಹಾಯಕ ಸಂಚಾರ ವ್ಯವಸ್ಥಾಪಕರ ಮೊ: 7760992258 ಸಂಖ್ಯೆಗೆ ಸಂಪರ್ಕಿಸುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಥಳೀಯ ಸಾರಿಗೆಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ : ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದಿಂದ ಡಿ.8 ರಿಂದ 14ರವರೆಗೆ ಅರಕೇರಿಯ ಶ್ರೀ ಅಮೋಘಸಿದ್ದ ದೇವರ ಜಾತ್ರೆ ಹಾಗೂ ಗುಡ್ಡಾಪುರದ ಶ್ರೀ ದಾನಮ್ಮದೇವಿ ಜಾತ್ರೆಗೆ ಹೆಚ್ಚುವರಿ ಸಾರಿಗೆಗಳ ಕಾರ್ಯಾಚರಣೆ ಮಾಡುವುದರಿಂದ ಸ್ಥಳೀಯ ಸಾರಿಗೆಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯವಾಗಲಿದ್ದು, ಪ್ರಯಾಣಿಕರು ನಿಗಮದೊಂದಿಗೆ ಸಹಕರಿಸುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ.

# ವೃತ್ತಕ್ಕೆ ಸೇವಾಲಾಲ ನಾಮಕರಣ: ಆಕ್ಷೇಪಣೆ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿಜಯಪುರ ನಗರದ ಅಲ್ಲಾಪುರ ತಾಂಡಾ ಹತ್ತಿರ ಸಿಂದಗಿ ರಸ್ತೆ (ಉಕ್ಕಲಿಗೆ ಹೋಗುವ ರಸ್ತೆ)ಯ ವೃತ್ತಕ್ಕೆ ಶ್ರೀ ಸೇವಾಲಾ ಮಹಾರಾಜ ವೃತ್ತವೆಂದು ನಾಮಕರಣ ಮಾಡಲು ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಠರಾವು ಮಾಡಲಾಗಿದೆ.

ಸದರಿ ಠರಾವಿನ ಕುರಿತು ಸಾರ್ವಜನಿಕರಲ್ಲಿ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆಗಳನ್ನು ಮಹಾನಗರ ಪಾಲಿಕೆಗೆ ಸಲ್ಲಿಸುವಂತೆ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.14 ರಂದು ಸಿರಿಧಾನ್ಯ ಪಾಕ ಸ್ಪರ್ಧೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಅಂತರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳ 2024ರ ಅಂಗವಾಗಿ ವಿಜಯಪುರ ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ವಿಜಯಪುರದ ಜಿಲ್ಲಾ ಕೃಷಿ ತರಬೇತಿ ಕೇಂದ್ರ,ಹಿಟ್ನಳ್ಳಿ ಫಾರ್ಮದಲ್ಲಿ ಡಿಸೆಂಬರ್ 14 ರಂದು ಏರ್ಪಡಿಸಲಾಗಿದೆ.

ರಾಜ್ಯ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕಾಗಿ ಜಿಲ್ಲೆಯಿಂದ ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಜಿಲ್ಲೆಯ ಎಲ್ಲ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿರುತ್ತದೆ. ಸಿರಿ ಧಾನ್ಯ ಪಾಕ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಚಿಸುವವರು ತಮ್ಮ ಹೆಸರನ್ನು ಡಿಸೆಂಬರ್ 13ರೊಳಗಾಗಿ ವಿಜಯಪುರದ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿಯ ದೂರವಾಣಿ 9108151786 ಸಂಖ್ಯೆಗೆ ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಅರ್ಜುನ ಎಂಬ ಆನೆಯ ಸಾವು, ಮತ್ತು ಭವಾನಿ ರೇವಣ್ಣ ಅವರ 1.5 ಕೋಟಿಯ ಕಾರು

**ಉದಯರಶ್ಮಿ ನ್ಯೂಸ್**





ಕಳ್ಳರನ್ನು ಹಿಡಿಯುವ ಪೋಲೀಸರ ಕಾರ್ಯಾಚರಣೆಯಲ್ಲಿ ಪೋಲೀಸರೇ ಹತ್ಯೆಯಾದಂತಾಗಿದೆ ಅರ್ಜುನನ ಸಾವು. ಬಹುಶಃ ಖೆಡ್ಡಾ ಕಾರ್ಯಾಚರಣೆಯ ಜವಾಬ್ದಾರಿ ಹೊತ್ತ ಅರಣ್ಯ ಅಧಿಕಾರಿಗಳ ಬೇಜವಾಬ್ದಾರಿ ಅಥವಾ ನಿರ್ಲಕ್ಷ್ಯದಿಂದ ಅರ್ಜುನನ ಸಾವು ಸಂಭವಿಸಿರುವ ಎಲ್ಲಾ ಸಾಧ್ಯತೆಗಳು ಇವೆ. ಒಂದಕ್ಕೊಂದು ಭಿನ್ನ ವರದಿಗಳು ಬರುತ್ತಿವೆ. ಸರ್ಕಾರ ಒಂದು ತಟಸ್ಥ ಅಧಿಕಾರಿಗಳಿಂದ ನಿಷ್ಪಕ್ಷಪಾತ ತನಿಖೆ ನಡೆಸಿದರೆ ಸತ್ಯ ಹೊರಬರಬಹುದು. ಅದರಿಂದ



ತಪ್ಪಿತಸ್ಥರಿಗೆ ಶಿಕ್ಷೆ ಮತ್ತು ಮುಂದೆ ಈ ರೀತಿಯ ಕಾರ್ಯಾಚರಣೆಗಳಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಎಚ್ಚರಿಕೆ ವಹಿಸಬಹುದು..

ಹುಲಿ ಉಗುರು ಮತ್ತು



ಪ್ರಬುದ್ಧ ಮನಸ್ಸು ಸಮಾಜ

ವಿವೇಕಾನಂದ ಎಚ್. ಕೆ.

**ಉದಯರಶ್ಮಿ ದಿನಪತ್ರಿಕೆ**

ಇತರ ಪ್ರಾಣಿಯ ವಸ್ತುಗಳ ಬಗ್ಗೆ ವೀರೋಚಿತವಾಗಿ ಮಾಧ್ಯಮಗಳ ಮುಂದೆ ಮಾತನಾಡಿದ ಅರಣ್ಯ ಇಲಾಖೆಯ ಅಧಿಕಾರಿಗಳು ಅರ್ಜುನನ ರಕ್ಷಣೆಗಾಗಿ ಇನ್ನಷ್ಟು ಶ್ರಮವಹಿಸಿದ್ದರೆ ಒಳ್ಳೆಯದಿತ್ತು ಎಂಬ ಸಾರ್ವಜನಿಕ ಅಭಿಪ್ರಾಯವನ್ನು ಮಂಡಿಸುತ್ತಾ..

ಮೂಕ ಪ್ರಾಣಿಗಳ ವಿಷಯದಲ್ಲಿ ಮನುಷ್ಯ ಇನ್ನೂ ಹೆಚ್ಚು ಹೃದಯವಂತಿಕೆ ತೋರಬೇಕು. ಇಲ್ಲದಿದ್ದರೆ ಮನುಷ್ಯರೇ ಖೆಡ್ಡಾಗೆ ಬೀಳಬಹುದು..

ಅರ್ಜುನನ ಸಾಧನೆಗಳನ್ನು ಮೆಲುಕು ಹಾಕುತ್ತಾ ಅದಕ್ಕೆ ನಮ್ಮ ಆಶ್ರು ತರ್ಪಣೆ..

**ಮತ್ತೊಂದು ಸುದ್ದಿ..**

ಎಷ್ಟೇ ನಿರ್ಲಕ್ಷಿಸಬೇಕೆಂದರೂ ಸಾಧ್ಯವಾಗದೆ ಆ ಹತ್ತು ನಿಮಿಷಗಳ ಶ್ರೀಮತಿ ಭವಾನಿ ರೇವಣ್ಣ ಅವರ ಅಪಘಾತದ ವಿಡಿಯೋ ತುಣುಕು ಸ್ವಲ್ಪ ಕೆಣಕುತ್ತದೆ..

ಚಪ್ಪಲಿಯು ಬೆಲೆ ಎಷ್ಟೇ ಲಕ್ಷಗಳಿದ್ದರು ಅದನ್ನು ತಲೆಗೆ ಹಾಕಿಕೊಳ್ಳುವುದಿಲ್ಲ, ಕಾಲಿಗೆ ಹಾಕಿಕೊಳ್ಳಬೇಕು. ಹಾಗೆಯೇ ಕಾರು ಎಷ್ಟೇ ಬೆಲೆಯದ್ದಾದರು ರಸ್ತೆಗಳಲ್ಲಿ ಓಡಾಡಲೇ ಬೇಕು. ಆಗ ಯಾವುದೇ ರೀತಿಯ ಅಪಘಾತದ ಸಾಧ್ಯತೆ ಇದ್ದೇ ಇರುತ್ತದೆ..

ಆ ರೀತಿಯ ಆಕಸ್ಮಿಕಗಳಲ್ಲಿ ಅವರ ಕಾರಿಗೆ ಯಾರೋ ಒಬ್ಬರು ತಪ್ಪಾಗಿ ತಮ್ಮ ದ್ವಿಚಕ್ರ ವಾಹನ ಸಣ್ಣದಾಗಿ ಡಿಕ್ಕಿ ಹೊಡೆಯುತ್ತಾರೆ. ಅದಕ್ಕೆ ಶ್ರೀಮತಿ ಭವಾನಿ ರೇವಣ್ಣನವರ ಪ್ರತಿಕ್ರಿಯೆ ಮಾತ್ರ ಸ್ವೀಕಾರಕ್ಕೇ ಯೋಗ್ಯವಲ್ಲದ ಅಯೋಗ್ಯ ರೀತಿಯಲ್ಲಿತ್ತು..

ಮಾಜಿ ಸಚಿವ ರೇವಣ್ಣ ಮತ್ತು ವಿಧಾನ ಪರಿಷತ್ತಿನ ಸದಸ್ಯ ಸೂರಜ್ ರೇವಣ್ಣ ಅದನ್ನು ಒಪ್ಪಿಕೊಂಡು ಕ್ಷಮೆ ಯಾಚಿಸಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡರು ಮಾತ್ರ ತಮ್ಮ ಘನತೆಗೆ ತಕ್ಕುದಲ್ಲದ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ..

ಒಂದು ಹಂತಕ್ಕೆ ಶ್ರೀಮತಿ ಭವಾನಿ ರೇವಣ್ಣ ಅವರಿಗೆ ಸ್ವಲ್ಪ ರಿಯಾಯಿತಿ ನೀಡಬಹುದು. ಪರಿಚಿತರ ದುಬಾರಿ ಕಾರಿಗೆ ಯಾರೋ ಅಪರಿಚಿತರು ತಪ್ಪಾಗಿ ಗ್ರಹಿಸಿ ಅಪಘಾತ ಮಾಡಿ ಅವರು ಸಣ್ಣ ಪುಟ್ಟ ಗಾಯಗಳಿಂದ ಪಾರಾದಾಗ ಸಹಜವಾಗಿ ಸ್ವಲ್ಪ ಕೋಪ ಬರುತ್ತದೆ. ಆಗ ಬೈಕ್ ಸವಾರನಿಗೆ ಯಾರೇ ಆಗಲಿ ಬೈಯ್ಯುವುದು ಸಹಜ ಮತ್ತು ಸಾಮಾನ್ಯ. ಆದರೆ ಅದನ್ನು ಮೀರಿ ಭವಾನಿ ರೇವಣ್ಣನವರು ಅಹಂಕಾರಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ದುರಹಂಕಾರದ ಮಾತುಗಳನ್ನು ಆಡಿರುವುದು ಮತ್ತು ಅವರ ಅಮಾನವೀಯ ನಡವಳಿಕೆ ಒಪ್ಪಿಕೊಳ್ಳುವ ವಿಷಯವಲ್ಲ..

ಮಧ್ಯ ವಯಸ್ಸು ದಾಟಿ, ಸಾರ್ವಜನಿಕ ಜೀವನದ ಅಧಿಕಾರ ಸ್ಥಾನಕ್ಕೆ ಹತ್ತಿರವಾಗಿದ್ದು, ಎಲ್ಲಾ ಆಗುಹೋಗುಗಳ ಬಗ್ಗೆ ಅರಿವಿದ್ದರು ಮನುಷ್ಯನಿಗಿಂತ ವಸ್ತುವಿಗೆ ಹಣದ ಕಾರಣಕ್ಕಾಗಿ ಬೆಲೆ ಕೊಡುವುದು ಮತ್ತು ಆತನ ಜೀವದ ಬಗ್ಗೆ ಕೇವಲವಾಗಿ ಮಾತನಾಡುವುದು ಸಹಿಸಲು ಸಾಧ್ಯವಿಲ್ಲ..

ಏನೋ ಒಂದಷ್ಟು ಬೈದು, ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟು ವಾಹನ ವಿಮೆ ಸೌಲಭ್ಯ ಪಡೆದಿದ್ದರೆ ಅದು ಸಹಜವಾಗಿತ್ತು. ಆದರೆ ಅವರು ಹಣ ಅಧಿಕಾರದ ಕಾರಣಕ್ಕಾಗಿ ಮನಸ್ಸಿನೊಳಗಿನ ಸಾಮಾನ್ಯರ ಬಗೆಗಿನ ತಿರಸ್ಕಾರ ಹೊರ ಹಾಕಿರುವುದು ಈ ರೀತಿಯ ಕೆಲವರ ಮೂಲ ಮನೋಭಾವದ ಮುಖವಾಡ ಬಯಲಾದಂತಾಗಿದೆ..

ಇದು ವ್ಯಾಪಕ ಟೀಕೆಗೆ ಒಳಗಾಗಿರುವುದರಿಂದ ವಸ್ತು ಸಂಸ್ಕೃತಿಯ ವಿಜೃಂಭಣೆಯ ವಿರುದ್ಧ ಜನಸಾಮಾನ್ಯರು ಮಾನವೀಯ ಮೌಲ್ಯಗಳ ಸಂಸ್ಕೃತಿಗೆ ಹೆಚ್ಚಿನ ಮಹತ್ವ ನೀಡಲು ಬಯಸುತ್ತಾರೆ ಎಂಬ ವಿಷಯ ಮೆಚ್ಚುಗೆಗೆ ಅರ್ಹವಾಗಿದೆ..




ಇನ್ನಾದರು ಭವಾನಿ ರೇವಣ್ಣನವರು ಸಾರ್ವಜನಿಕವಾಗಿ ಕ್ಷಮೆ ಕೇಳಿದರೆ ಉತ್ತಮ. ಕಾರು ಪವಿತ್ರವಲ್ಲ ಮನುಷ್ಯ ಮುಖ್ಯವಾಗಬೇಕು. ದೇವರು – ಧರ್ಮದ ಮೂಲ ಆಶಯ ಪೂಜೆ ಅಲಂಕಾರ, ಹಾಸನಾಂಬೆಯ ದರ್ಶನ ಮಾತ್ರವಲ್ಲ ಮಾನವೀಯ ನಡವಳಿಕೆಯೇ ಮುಖ್ಯವಾಗಬೇಕು..

## ಜೊತೆಯಿರಲು ನೀನು ನಗುವೆನು ನಾನು

**ಕಾವ್ಯರಶ್ಮಿ**

– ಗುಣ ಎಸ್.

("ನಮ್ಮ ಕಥಾ ಅರಮನೆ" ಬರಹಗಾರರು)





ಉದಯರಶ್ಮಿ ದಿನಪತ್ರಿಕೆ

ಜೊತೆಯಿರಲು ನೀನು
ನಗುತಲಿರುವೆ ನಾನು
ಇದಕಿಂತ ಹೆಚ್ಚಿಗೆ ಏನು
ಎಂದೂ ಬೇಡಲಾರೆನು

ಸಿಕ್ಕಿರಲು ನಿನ್ನ ಪ್ರೇಮ
ನಾ ಸೀತೆ ನೀನೆ ರಾಮ
ಬೇಡ ಬೇರೆ ಸಂಭ್ರಮ
ನಾವಾಗುವ ಅನುಪಮ

ಬಯಕೆಗಳನ್ನೆಲ್ಲ ಮೀರಿ
ನೋವುಗಳನೆಲ್ಲ ತೂರಿ
ಹಿಡಿದು ಆ ಒಲವ ದಾರಿ
ಹೋಗುವ ನಭದಿ ಹಾರಿ

# ವಿಚ್ಛೇದನವೊಂದು ಪರಿಹಾರವೇ?

**ಭಾವರಶ್ಮಿ**

– ಶೋಭಾ ಮೂರ್ತಿ

("ನಮ್ಮ ಕಥಾ ಅರಮನೆ" ಬರಹಗಾರರು)



**ಉದಯರಶ್ಮಿ ದಿನಪತ್ರಿಕೆ**

ಭಾರತೀಯ ಸಮಾಜದಲ್ಲಿ ವಿವಾಹವನ್ನು ಪವಿತ್ರವಾದ ಬಂಧನವೆಂದು ಅರ್ಥೈಸಲಾಗಿದೆ. ವಿವಾಹ ಕೇವಲ ಇಬ್ಬರು ವ್ಯಕ್ತಿಗಳ ನಡುವಿನ ಒಪ್ಪಂದವಾಗದೇ ಎರಡು ಕುಟುಂಬಗಳನ್ನು ಬೆಸೆಯುವ ಧಾರ್ಮಿಕ ಸಂಸ್ಕಾರವಾಗಿದೆ.

ವೈಜ್ಞಾನಿಕ ಪ್ರಗತಿ, ಆರ್ಥಿಕ ಸ್ವಾವಲಂಭನೆ, ವಿದೇಶಿ ಸಂಸ್ಕೃತಿಯ ಪ್ರಭಾವ, ಉದ್ಯೋಗದಲ್ಲಿ ಮೀಸಲಾತಿ, ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಜೀವನದಿಂದಾಗಿ ವಿವಾಹ ವಿಚ್ಛೇದನ ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲು ಹೆಚ್ಚಾಗಿ ಕೇಳಿ ಬರುತ್ತಿದೆ.

ವಿಚ್ಛೇದನವೆಂದರೆ ಇಬ್ಬರು ವ್ಯಕ್ತಿಗಳ ನಡುವಿನ ವಿವಾಹ ಬಂಧನವನ್ನು ವಿಸರ್ಜಿಸುವ "ಕಾನೂನು ಪ್ರಕ್ರಿಯೆ" ವಿವಾಹ ವಿಚ್ಛೇದನಕ್ಕೆ ಅನೇಕ ಕಾರಣಗಳಿದ್ದು ಅದರಲ್ಲಿ ಪ್ರಮುಖವಾಗಿ ಪರಸ್ಪರ ಹೊಂದಾಣಿಕೆ ಇಲ್ಲದಿರುವುದು, ವಂಚನೆ, ಅತೃಪ್ತ ಭಾವನೆ, ಆರ್ಥಿಕ ತೊಂದರೆ, ಸಂವಹನದ ಕೊರತೆ, ಅತಿಯಾದ ನಿರೀಕ್ಷೆ, ಅಸಮಾನತೆ, ನಿಂದನೆ ಮತ್ತು ವಿವಾಹೇತರ ಸಂಬಂಧ ಹೊಂದಿರುವುದಾಗಿರುತ್ತದೆ.

ಹಿಂದಿನ ಕಾಲದಂತೆ ಇಂದು ಮಹಿಳೆಯರು ಕೇವಲ ಗೃಹಿಣಿಯರು ಆಗಿರದೇ ವೃತ್ತಿಪರ ಜೀವನವನ್ನು ನಡೆಸುತ್ತಿದ್ದಾರೆ. ಆರ್ಥಿಕವಾಗಿ ಸ್ವಾವಲಂಬನೆ ಹೊಂದುತ್ತಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸುತ್ತಿದ್ದಾರೆ. ಹಾಗೆಯೇ ಮನೆಯ ಕೆಲಸ ಕಾರ್ಯಗಳಲ್ಲಿ ಗಂಡನ ಸಹಾಯ, ಸಹಕಾರವನ್ನು ಅಪೇಕ್ಷಿಸುತ್ತಾರೆ. ತಾನು ಗಂಡು ಹೊರಗಡೆ ಕೆಲಸ ಮಾಡುವುದು ಮಾತ್ರ ತನಗೆ ಸಂಬಂಧಿಸಿದ್ದು ಗೃಹಕೃತ್ಯ ಮತ್ತು ಮಕ್ಕಳ ಪೋಷಣೆಯಲ್ಲಿ ತಾನು ಸ್ಪಂದಿಸುವುದಿಲ್ಲವೆಂದರೆ ಅಲ್ಲಿಂದಲೇ ದಂಪತಿಗಳ ನಡುವೆ ತಿಕ್ಕಾಟ ಶುರುವಾಗುತ್ತದೆ.

ಒಬ್ಬರನ್ನೊಬ್ಬರು ಸಹಿಸಲು ಅಸಾಧ್ಯವೆಂದು ಮನವರಿಕೆಯಾದಾಗ ವಕೀಲರನ್ನು ಸಂಪರ್ಕಿಸಿ ವಿಚ್ಛೇದನದ ಮೊರೆ ಹೋಗುವುದು ಹೆಚ್ಚಾಗಿದೆ. ಅದರಲ್ಲೂ 2023 ರಲ್ಲಿ ಬದಲಾದ ಕಾನೂನಿನ ನಿಯಮಗಳಿಂದಾಗಿ ವಿಚ್ಛೇದನ ಪಡೆಯುವುದು ಸುಲಭ ಮತ್ತು ತ್ವರಿತವಾಗಿದೆ.

ಸಂಸಾರಿಕ ಜಗಳಗಳಿಗೆ ವಿಚ್ಛೇದನವೊಂದು ಪರಿಹಾರವೇ ಎಂಬ ಪ್ರಶ್ನೆ ಬಂದಾಗ ಖಂಡಿತ ಇಲ್ಲವೆನ್ನುತ್ತದೆ ನಮ್ಮ ಕಾನೂನು, ಸಂಸ್ಕಾರ ಮತ್ತು ಸಂಸ್ಕೃತಿಗಳು. ವಿಚ್ಛೇದನದಿಂದ ತಾತ್ಕಾಲಿಕವಾಗಿ ಒಬ್ಬರಿಂದೊಬ್ಬರು ದೈಹಿಕವಾಗಿ ಬೇರ್ಪಡಬಹುದೇ ಹೊರತಾಗಿ, ಮಾನಸಿಕವಾಗಿ, ಆರ್ಥಿಕವಾಗಿ, ಭಾವನಾತ್ಮಕವಾಗಿ ಬೇರ್ಪಡುವುದು ಕಷ್ಟಸಾಧ್ಯ. ಅದರಲ್ಲೂ ವಿಚ್ಛೇದನ ಪಡೆದ ದಂಪತಿಗಳಿಗೆ ಮಕ್ಕಳಿದ್ದರೆ ಅವರ ಪಾಡಂತು ಕೇಳುವುದೇ ಬೇಡ. ಆ ಮಕ್ಕಳು ಭವಿಷ್ಯದಲ್ಲಿ ಕ್ರೌರ್ಯತನವನ್ನೋ ಅಥವಾ ಮಾನಸಿಕ ಅಸ್ವಸ್ಥತೆಯನ್ನು ಹೊಂದುವ ಸಾಧ್ಯತೆ ಇರುತ್ತದೆ. ಪ್ರೀತಿ, ಪ್ರೇಮ, ವಿವಾಹ ಮತ್ತು ಸಂಬಂಧಗಳ ಕುರಿತು ಆ ಮಕ್ಕಳು ಋಣಾತ್ಮಕ ಧೋರಣೆಯನ್ನು ತಳೆಯುತ್ತಾರೆ. ಸಮಾಜದಲ್ಲಿ ದಂಪತಿಗಳು ಜೊತೆಯಲ್ಲಿದ್ದಾಗ





ಪಡೆಯುವ ಗೌರವ ವಿಚ್ಛೇದನದ ನಂತರ ದೊರೆಯಲಾರದು. ವಿಚ್ಛೇದನ ಪಡೆಯುವ ಕಾನೂನು ಪ್ರಕ್ರಿಯೆಗಳಿಂದಾಗಿ ಮಾನಸಿಕವಾಗಿ, ಆರ್ಥಿಕವಾಗಿ ಜರ್ಜರಿತವಾಗದೇ ಹೋಗುವುದಿಲ್ಲ. ಒಂದೊಮ್ಮೆ ಮಕ್ಕಳಿದ್ದರೆ ಅವರ ವಿದ್ಯಾಭ್ಯಾಸ ಮತ್ತು ಬೆಳವಣಿಗೆಗಳಲ್ಲಿ ದುಷ್ಪರಿಣಾಮ ಉಂಟಾಗುತ್ತದೆ.

ಇಷ್ಟೆಲ್ಲಾ ಸಮಸ್ಯೆಗಳನ್ನು ಎದುರಿಸುವ ಮುನ್ನ ದಂಪತಿಗಳ ನಡುವೆ ಯಾವ ವಿಚಾರಕ್ಕಾಗಿ ವಿಚ್ಛೇದನದ ಪ್ರಸ್ತಾಪ ಬಂದಿದೆ. ಅದನ್ನು ಸರಿಪಡಿಸಲು ಇಬ್ಬರು ಆದಷ್ಟು ಪ್ರಯತ್ನ ಪಡಬಹುದು. ಇಬ್ಬರು ಪರಸ್ಪರ ಮಾತನಾಡಿ ತಮ್ಮಿಬ್ಬರ ನಡುವಿನ ಕಂದಕವನ್ನು ಸರಿಪಡಿಸಬಹುದು. ಅವಶ್ಯಕತೆಯಿದ್ದರೆ ಆಪ್ತ ಸಲಹೆಗಾರರ ಮಾರ್ಗದರ್ಶನವನ್ನು ಪಡೆಯಬಹುದು. ವಿಚ್ಛೇದನದ ನಂತರ ಎದುರಿಸಬೇಕಾದ ವಿಷಯಗಳನ್ನು ಮೊದಲೇ ಅವಲೋಕಿಸಿದರೆ ಇಬ್ಬರ ಹಿತದೃಷ್ಟಿಯಿಂದಲು ಅನುಕೂಲಕರ. ಇಬ್ಬರು ಸೇರಿ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ರಾಜಿ ಮಾಡಿಕೊಳ್ಳಬಹುದು. ಹೊಂದಾಣಿಕೆಯ ಸೂತ್ರಗಳನ್ನು ಹಾಕಿಕೊಂಡು, ಪರಸ್ಪರ ಸಮಯವನ್ನು ಇಬ್ಬರು ಹಂಚುಕೊಂಡು ಒಂದೊಳ್ಳೆ ನಿರ್ಧಾರವನ್ನು ತೆಗೆದು ಕೊಳ್ಳಬಹುದು. ವಿವಾಹ ವಿಚ್ಛೇದನವೊಂದೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಲ್ಲ ಎಂಬುವುದನ್ನು ಅರಿಯಬೇಕು. ಜೀವನದಲ್ಲಿ "ನಾ ಹೆಚ್ಚು, ತಾ ಹೆಚ್ಚು" ಎನ್ನುವ ಅಹಂ ಬಿಟ್ಟು ಕೂಡಿ ಬಾಳಿದರೆ ಸ್ವರ್ಗ ಸುಖವೆನ್ನುವುದನ್ನು ಅರಿಯಬೇಕು. ಆಗಲೇ ನಮ್ಮ ಭಾರತೀಯ ಸಂಪ್ರದಾಯ ಸಂಸ್ಕಾರಗಳಿಗೊಂದು ಮಾನ್ಯತೆ.